ಪ್ರೊ. ಸಾ.ಕೃ.ರಾ. - ಸಮಗ್ರ ಸಾಹಿತ್ಯ - ೧೫

ಶ್ರೀ ರಾಮಾನುಜ-ದರ್ಶನ

ವಿದ್ಯಾಲಂಕಾರ

ಪ್ರೊ. ಸಾ. ಕೃ. ರಾಮಚಂದ್ರ ರಾವ್

ಸುರಮಾ ಪ್ರಕಾಶನ
ಬೆಂಗಳೂರು-11

ಶ್ರೀ ರಾಮಾನುಜ-ದರ್ಶನ

ಪ್ರೊ|| ಸಾ. ಕೃ. ರಾಮಚಂದ್ರ ರಾವ್

ಪ್ರಕಾಶಕರು :

ಸುರಮಾ ಪ್ರಕಾಶನ

ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ (ರಿ.)

೩೦೫, ೬ನೇ ಅಡ್ಡರಸ್ತೆ, ೧ನೇ ಬ್ಲಾಕ್, ಜಯನಗರ, ಬೆಂಗಳೂರು-೫೬೦ ೦೧೧.

Sri Ramanuja-darsana, by Vidyalankara Prof S. K. Ramachandra Rao. Published by Dr. S. R. Sudarshan for Surama Prakasana, the publication wing of the Prof S. K. Ramachandra Rao Memorial Trust, 305, 6 Cross, I Block, Jayanagar, Bangalore 560011.
Phone: 080-26563957
E-Mail: drsrsudarshan@gmail.com
Website: www.profskr.com

© Prof. S. K. Ramachandra Rao Memorial Trust ®

Pages: 48

First Edition: January 1967
Second Edition: January 2012

Price: Rs.40/-

Typeset and printed at:
Vagartha, Bangalore-19
vagartha@yahoo.com

ಅನುಕ್ರಮಣಿಕೆ

ಲೇಖಕರ ಪರಿಚಯ v

ಮುನ್ನುಡಿ vii

ರಾಮಾನುಜರು

ಹಿನ್ನೆಲೆ ೧

ಬಾಳುವೆ ೫

ಪ್ರಭಾವ ೧೨

ಅವರ ದರ್ಶನ

ತತ್ತ್ವತ್ರಯ ೧೭

ತ್ರಿವಿಧಚೇತನರು ೨೩

ಉಪಾಯಗಳು ೨೬

ಭರನ್ಯಾಸ ೨೯

ಅರ್ಥಪಂಚಕ ೩೨

ಪರಿಶಿಷ್ಟ ೩೮

ಲೇಖಕರ ಪರಿಚಯ



ಪ್ರೊ. ಸಾ. ಕೃ. ರಾಮಚಂದ್ರರಾಯರು (1925–2006) ಈ ತಲೆಮಾರಿನ ವಿಖ್ಯಾತ ವಿದ್ವಾಂಸರು, ಚಿಂತಕರು, ಸಂಗೀತಜ್ಞರು, ಕಲಾಕಾರರು, ಪ್ರಬಂಧಕಾರರು, ಉತ್ತಮ ವಾಗ್ಮಿಗಳಾಗಿದ್ದರು.

ಅವರು ಬಾಲ್ಯ ವಿದ್ಯಾಭ್ಯಾಸವನ್ನು ಅವರ ತೀರ್ಥರೂಪರವರಿಂದಲೇ ಪಡೆದು, ನಂಜನಗೂಡಿನ ಪಾಠಶಾಲೆಯಲ್ಲಿ ಸಂಸ್ಕೃತಾಧ್ಯಯನ ಮಾಡಿ, ಮೈಸೂರಿನಲ್ಲಿ ಮಹಾವಿದ್ವಾನ್ ಪಾಲಕ್ಕಾಡು ನಾರಾಯಣ ಶಾಸ್ತ್ರಿಗಳಲ್ಲಿ

ಸಭಾಷ್ಯ ಪ್ರಸ್ಥಾನತ್ರಯಗಳನ್ನು ಅಭ್ಯಾಸ ಮಾಡಿದ್ದರು. ಅನಂತರ ಮನಃಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ವೃತ್ತಿ ಪ್ರಾರಂಭಿಸಿದ್ದರು. ಅನಂತರ NIMHANSನಲ್ಲಿ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಹಲವು ಕಾಲ ಇದ್ದರು.

ಅವರು ಭಾರತೀಯ ಇತಿಹಾಸ, ಸಾಹಿತ್ಯ, ಸಂಸ್ಕೃತಿ, ಸಂಗೀತ ಮತ್ತು ಕಲೆಗಳ ಅಧ್ಯಯನ ಮಾಡಿ ಸಂಹಳದ ನಾರದ ಮಹಾಥೇರರ ಬಳಿ ಪಾಳಿ ಮತ್ತು ತ್ರಿಪಿಟಕಗಳನ್ನು, ವಿಜಯಸೂರಿ ಗಣಿಯವರಲ್ಲಿ ಅರ್ಧಮಾಗಧೀ ಪ್ರಾಕೃತವನ್ನೂ ಮತ್ತು ಸ್ವಪರಿಶ್ರಮದಿಂದ ಟಿಬೆಟ್ ಭಾಷೆಯನ್ನು ಕಲಿತರು. ರಾಯರು ಕೆಲಕಾಲ ಅಮೆರಿಕೆಯ ಪೆಸಿಫಿಕ್ ವಿಶ್ವವಿದ್ಯಾಲಯದ ಭಾರತೀಯ ಸಂಸ್ಕೃತಿ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು.

ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪಡೆದು, ಅನೇಕ ಅಕ್ಯಾಡೆಮಿ ಮತ್ತು ವಿದ್ವತ್ ಸಂಸ್ಥೆಗಳ, ಆಗಮ ಮಹಾಮಂಡಳಿ ಮತ್ತು ಇತರ ಸಂಸ್ಥೆಗಳ ಪದಾಧಿಕಾರಿಗಳಾಗಿದ್ದರು.

ರಾಯರು ಕನ್ನಡ ಮತ್ತು ಆಂಗ್ಲಭಾಷೆಗಳಲ್ಲಿ ನೂರೈವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದರು. ಅವರ 'ಮೂರ್ತಿಶಿಲ್ಪ-ನೆಲೆ-ಹಿನ್ನೆಲೆ' ಮತ್ತು 'ತಿರುಪತಿ ತಿಮ್ಮಪ್ಪ' ಎಂಬ ಪುಸ್ತಕಗಳು ರಾಜ್ಯಸಾಹಿತ್ಯ ಅಕ್ಯಾಡಮಿ ಪ್ರಶಸ್ತಿ ಪಡೆದವು.

ವಿದ್ಯಾಲಂಕಾರ, ಶಾಸ್ತ್ರ ಚೂಡಾಮಣಿ, ಸಂಗೀತ ಕಲಾರತ್ನ, ವಾಚಸ್ಪತಿ ಮೊದಲಾದ ಬಿರುದುಗಳಿಗೆ ಭಾಜಿಯಾಗಿದ್ದರು. ವೇದ ಸಮ್ಮಾನ ಪ್ರಶಸ್ತಿಗೂ ಪಾತ್ರರಾಗಿದ್ದರು. ಅವರು ಸಾಂಪ್ರಾದಾಯಿಕ ವ್ಯಾಖ್ಯಾನರೀತ್ಯಾ ಋಗ್ವೇದ ದರ್ಶನವೆಂಬ ಬೃಹತ್ ಯೋಜನೆ ಯೊಂದನ್ನು ಕೈಗೊಂಡು, ಹದಿನೇಳು ಸಂಪುಟಗಳನ್ನು ರಚಿಸಿದ್ದರು.

ಮುನ್ನುಡಿ

ನನ್ನ ತಂದೆ ಪ್ರೊ. ಸಾ. ಕೃ. ರಾಮಚಂದ್ರ ರಾಯರು ೧೯೬೫ ರವರೆಗೆ ನಿಮ್ಹಾನ್ಸ್‌ನಲ್ಲಿ ಮನಃಶಾಸ್ತ್ರವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದರು. ೧೯೬೫ರಲ್ಲಿ ಈ ಸಂಸ್ಥೆಯ ನಿರ್ದೇಶಕರ ಒಂದು ನಿರ್ಣಯದಿಂದ ಅವರಿಗೆ ಅನ್ಯಾಯವಾಯಿತೆಂದು ಬೇಸರಗೊಂಡು, ಅವರು ನಿಮ್ಹಾನ್ಸ್‌ನಿಂದ ಹೊರಬಂದರು. ಆಗ ನನಗೆ ಮತ್ತು ನನ್ನ ಅಕ್ಕನಿಗೆ ನಾಲ್ಕು ಹಾಗು ಆರು ವರ್ಷ. ಆಗ ಅವರಿಗೆ ಸಂಸಾರ ನಿರ್ವಹಣೆ ಸ್ವಲ್ಪಮಟ್ಟಿಗೆ ಕಷ್ಟವೇ ಆಯಿತೆಂದು ಹೇಳಬಹುದು - ಅವರ ಬರವಣಿಗೆಯಿಂದಲೇ ಸಾಗುತ್ತಿತ್ತು.

೧೯೬೬ರಲ್ಲಿ ಅವರು ಮತ್ತು ನನ್ನ ತಾಯಿಯವರು ಒಂದು ಪ್ರಕಾಶನವನ್ನು ಸ್ಥಾಪಿಸಿದರು; ಅದಕ್ಕೆ ಸುರಮಾ ಪ್ರಕಾಶನವೆಂದು ನಾಮಕರಣವೂ ಆಯಿತು. ಈ ಪ್ರಕಾಶನದ ಉದ್ದೇಶವೇನೆಂದು ಅವರೇ ಬರೆದಿದ್ದಾರೆ.

"ಉತ್ತಮವಾದ ಸಾಹಿತ್ಯವನ್ನು ಸುಲಭ ಬೆಲೆಯಲ್ಲಿ ಸಾಮಾನ್ಯ ಜನರಿಗೆ ಹಿಡಿಸುವಂತೆ ಒದಗಿಸುವುದು ಈ ಪ್ರಕಾಶನದ ಉದ್ದೇಶ. ನಮ್ಮ ದೇವತೆಗಳ ಕಲ್ಪನೆ, ನಾಡಿನ ಹಿರಿಯರು, ದೇವಾಲಯಗಳು, ಸಾಹಿತ್ಯ ಕೃತಿಗಳು, ಸಂಗೀತ, ಚಿತ್ರಕಲೆ, ಧರ್ಮ, ದರ್ಶನಗಳು, ಸಾಮಾಜಿಕ ಪದ್ಧತಿಗಳು, ಮನಃಶಾಸ್ತ್ರವಿವರಗಳು, ಮಕ್ಕಳ ಕಥೆಗಳು - ಈ ವಿಷಯಗಳನ್ನು ಕುರಿತು ಸುಮಾರು ೬೦ ಪುಟಗಳ ಒಂದೊಂದು ಪುಸ್ತಕವನ್ನು ಹೊರತರುವ ಯೋಜನೆ ಇದೆ. ಈ ಪುಸ್ತಕಗಳನ್ನು ಬರೆಯುವವರು ಪ್ರೊ. ಎಸ್. ಕೆ. ರಾಮಚಂದ್ರ ರಾಯರು.

ಪ್ರತಿ ಪುಸ್ತಕದ ಬೆಲೆ ಒಂದೇ ರೂಪಾಯಿ. ಮುಂಗಡ ಚಂದಾದಾರರಾದರೆ ವರ್ಷಕ್ಕೆ ೧೦ ರೂಪಾಯಿಗಳಿಗೆ ೧೨ ಪುಸ್ತಕಗಳೂ ದೊರೆಯುತ್ತದೆ. ಪೋಸ್ಟ್ ವೆಚ್ಚವೂ ಇದರಲ್ಲಿ ಸೇರಿರುತ್ತದೆ...."

೧೯೬೬ರಲ್ಲಿ ಪ್ರಾರಂಭವಾದ ಈ ಯೋಜನೆ ಒಂದು ವರ್ಷ ನಡೆಯಿತು, ಮತ್ತು ಈ ಪುಸ್ತಕಗಳು ಹೊರಬಂದವು.

೧. ಗಣಪತಿಯ ಕಲ್ಪನೆ (೧೯೬೬ ಸೆಪ್ಟೆಂಬರ್)
೨. ಶ್ರೀ ಚಂದ್ರಶೇಖರಭಾರತಿ (೧೯೬೬ ಅಕ್ಟೋಬರ್)
೩. ಗೀತಗೋವಿಂದ (೧೯೬೬ ನವೆಂಬರ್)
೪. ತಿರುಪತಿಯ ದೇವಾಲಯ (೧೯೬೬ ಡಿಸೆಂಬರ್)
೫. ರಾಮಾನುಜ ದರ್ಶನ (೧೯೬೭ ಜನವರಿ)
೬.೭. ನಮ್ಮ ಸಂಗೀತ, ವಾಗ್ಗೇಯಕಾರರು (೧೯೬೭ ಫೆಬ್ರವರಿ, ಮಾರ್ಚ್)
೮. ವಾಲ್ಮೀಕಿ ಪ್ರತಿಭೆ (೧೯೬೭ ಏಪ್ರಿಲ್)
೯. ಬುದ್ಧನ ಬಾಳು, ಬೆಳಕು (೧೯೬೭ ಮೇ)
೧೦. ಅಶ್ವಘೋಷನ ಸೌಂದರನಂದ (೧೯೬೭ ಜೂನ್)
೧೧.೧೨. ರಾಮಾಯಣ ಸಮೀಕ್ಷೆ (೧೯೬೭ ಜುಲೈ, ಆಗಸ್ಟ್)

ಈ ಪುಸ್ತಕಗಳ ಪೈಕಿ 'ರಾಮಾನುಜ ದರ್ಶನ' ಒಂದನ್ನು ಬಿಟ್ಟು ಉಳಿದ ಪುಸ್ತಕಗಳು ಮರು ಪ್ರಕಟಣೆಯಾದವು.

೨೦೦೬ರಲ್ಲಿ ನನ್ನ ತಂದೆ ಕಾಲವಾದನಂತರ ನಾವು ಒಂದು ಸ್ಮಾರಕ ನಿಧಿಯನ್ನು ಸ್ಥಾಪಿಸಿದಾಗ, ನಮ್ಮಲ್ಲಿರುವ ಪುಸ್ತಕಗಳನ್ನು ಪಟ್ಟಿ ಮಾಡಿದೆವು. ರಾಮಾನುಜ ದರ್ಶನದ ಒಂದು ಪ್ರತಿಯೂ ನಮ್ಮಲ್ಲಿರಲಿಲ್ಲ, ನಾನು ಸುಮಾರು ಗ್ರಂಥಾಲಯಗಳಲ್ಲಿ ಹುಡುಕಿದರೂ ಸಿಗಲಿಲ್ಲ. ನಾಲ್ಕು ವರ್ಷದನಂತರ ಗೋಖಲೆ ಸಾರ್ವಜನಿಕ ಸಂಸ್ಥೆಯ ಗ್ರಂಥಾಲಯ ನವೀಕರಣವಾಯಿತೆಂದು ತಿಳಿದಾಗ ಅಲ್ಲಿ ಈ ಪುಸ್ತಕವನ್ನು ಹುಡುಕಿದೆ. ಸುಲಭವಾಗಿ ದೊರಕಿತು.

ಈ ಪುಸ್ತಕವನ್ನು ಅವರ ವಾಡಿಕೆಯಂತೆ ಸ್ಖಾಲಿತ್ಯವಿಲ್ಲದೆ ಅಂದವಾಗಿ ಅಕ್ಷರಜೋಡಣೆ ಮತ್ತು ಮುದ್ರಣ ಮಾಡಿದ ವಾಗರ್ಥ ಅವರಿಗೆ ಆಭಾರಿಯಾಗಿದ್ದೇನೆ.

ಸಾ. ರಾ. ಸುದರ್ಶನ

ಪುಷ್ಯ ಶುಕ್ಲ ದಶಮಿ
೩-೧-೨೦೧೨

ರಾಮಾನುಜರು

ಹಿನ್ನೆಲೆ

ದಕ್ಷಿಣದೇಶದ ಶ್ರೀವೈಷ್ಣವ ದೇವಾಲಯಗಳಲ್ಲಿ ದಿನ ದಿನವೂ 'ಶಾತ್ತುಮುರೈ' ಎಂಬ ಸೇವೆಯನ್ನು ಸಲ್ಲಿಸುವ ಪದ್ಧತಿಯಿದೆ. ಈ ಅವಸರದಲ್ಲಿ ನೆರೆದಿರುವ ಶ್ರೀವೈಷ್ಣವರೆಲ್ಲ ಸೇರಿ ಒಕ್ಕೊರಲಿನಿಂದ **''ಸರ್ವದೇಶ ದಶಾಕಾಲೇಷ್ವವ್ಯಾಹತಪರಾಕ್ರಮಾ ರಾಮಾನುಜಾರ್ಯದಿವ್ಯಾಜ್ಞಾ ವರ್ಧತಾಂ ಅಭಿವರ್ಧತಾಂ''** ಎಂದು ಘೋಷ ಮಾಡುತ್ತಾರೆ. ಅವರ ಸಂಪ್ರದಾಯಕ್ಕೆ ರಾಮಾನುಜಾಚಾರ್ಯರೇ ಪ್ರವರ್ತಕರು; ಆ ಜನಾಂಗವನ್ನು ರೂಢಿಸಿದವರು ಅವರೇ. ಮತತ್ರಯಗಳಲ್ಲಿ ಒಂದಾದ ವಿಶಿಷ್ಟಾದ್ವೈತ ದರ್ಶನವನ್ನು ದೃಢಪಡಿಸಿದವರು ಅವರು. ಹನ್ನೊಂದನೆಯ ಶತಮಾನದಲ್ಲಿ ಆರಂಭವಾದ ದಿವ್ಯಾಜ್ಞೆ ಇಡೀ ದಕ್ಷಿಣಭಾರತದಲ್ಲೆಲ್ಲ ಧ್ವನಿಸಿತು, ಉತ್ತರ ದಿಗ್ಭಾಗಕ್ಕೂ ಅದರ ಪ್ರಭಾವ ವ್ಯಾಪಿಸಿತು. ಶ್ರೀವೆಷ್ಣವರು ಶ್ರದ್ಧೆಯ ಆಳದಿಂದ ಅವರನ್ನು ಭಗವದಂಶಸಂಭೂತರೆಂದೂ, ಶೇಷಾವತಾರಿಗಳೆಂದೂ, ಲಕ್ಷ್ಮಣ ಸೂರಿಗಳೆಂದೂ, 'ಮತೋದ್ಧಾರಕಸಂಸ್ಥಾಪಕ ಸಂವರ್ಧಕ ಪುರುಷ' ರೆಂದೂ ವ್ಯವಹರಿಸುತ್ತಾರೆ. ನಾಡಿನ ಉತ್ಕೃಷ್ಟ ದಾರ್ಶನಿಕರಲ್ಲಿ ಒಬ್ಬರೆಂಬುದಂತೂ ನಿರ್ವಿವಾದವಾದುದು.

ರಾಮಾನುಜಾಚಾರ್ಯರಿಗೆ ತುಂಬ ಪೂರ್ವದಲ್ಲೇ ಭಾಗವತಧರ್ಮ ಈ ಪ್ರದೇಶದಲ್ಲಿ ಹರಡಿದ್ದಿತು. ಎಂಟು-ಒಂಬತ್ತನೆಯ ಶತಮಾನದ ಸುಮಾರಿಗೇ ತಮಿಳುನಾಡಿನ ಆಳ್ವಾರರೆಂಬ ವೈಷ್ಣವಸಂತರು ತಮ್ಮ ದಿವ್ಯಪ್ರಬಂಧಗಳನ್ನು ತಮಿಳುಭಾಷೆಯಲ್ಲಿ ರಚಿಸಿ ವಿಷ್ಣುಭಕ್ತಿಯನ್ನು ಊರ್ಜಿತಗೊಳಿಸಿದ್ದರು. ಇವರ ನಾಲ್ಕುಸಾವಿರ (ನಾಲಾಯಿರ) ಪದ್ಯ (ಪಾಶುರ) ಗಳನ್ನು ದ್ರಾವಿಡವೇದವೆಂದು ಪರಿಗಣಿಸುತ್ತಾರೆ. ಈ ಆಳ್ವಾರರಲ್ಲಿ ಪ್ರಮುಖರಾದ ನಮ್ಮಾಳ್ವಾರರು (ಶಠಕೋಪ, ಶಠಾರಿ, ಪರಾಂಕುಶಮುನಿ)

ರಚಿಸಿದ 'ತಿರುವಾಯ್‌ಮೋೞಿ'ಗೆ ತಮಿೞವೇದವೆಂದೇ ಹೆಸರು. ಮುಂದೆ ಬಂದ ನಾಥಮುನಿಗಳು ಇವರನ್ನು "ವೇದಂ ತಮಿೞ್‌ಶೆಯ್ದ ಮಾರನ್" ಎಂದು ಬಣ್ಣಿಸಿದ್ದಾರೆ. ಶ್ರೀವೈಷ್ಣವರಿಗೆ 'ಕುಲಪತಿ' ಇವರು.

ಕ್ರಿಸ್ತಾಬ್ದ ೮೨೪ ರಲ್ಲಿ ಹುಟ್ಟಿದ ನಾಥಮುನಿಗಳು (ರಂಗನಾಥ ಮುನಿಗಳು) ಕುಂಭಕೋಣದಲ್ಲಿದ್ದಾಗ ಅಲ್ಲಿನ ದೇವಾಲಯದಲ್ಲಿ ಹಾಡುತ್ತಿದ್ದ 'ಆರಾವಮುದೇ' ಎಂದು ಆರಂಭವಾಗುವ ನಮ್ಮಾೞ್ವಾರರ ಪಾಶುರಗಳನ್ನು ಕೇೞಿ ಮುಗ್ಧರಾದರೆಂದೂ, ಅನಂತರ ಆೞ್ವಾರುಗಳ ನಾಲ್ಕು ಸಾವಿರ ಪ್ರಬಂಧಗಳನ್ನು ಸಂಗ್ರಹಿಸಿ ದಿವ್ಯಗಾನಕ್ಕೆ ಅಳವಡಿಸಿದರೆಂದೂ ಪ್ರತೀತಿಯಿದೆ. ಶ್ರೀವೈಷ್ಣವ ಸಿದ್ಧಾಂತವನ್ನು ನಿರೂಪಿಸಿದವರೂ ನಾಥಮುನಿಗಳೇ. ಹೀಗಾಗಿ ಆೞ್ವಾರುಗಳ ಪ್ರಭಾವ ಈ ಸಿದ್ಧಾಂತದಲ್ಲಿ ಅನಿವಾರ್ಯವಾಗಿ ಕಾಣಿಸಿಕೊಳ್ಳುತ್ತದೆ.

ಶ್ರೀವೈಷ್ಣವರ ಗುರುಪರಂಪರೆ ಲಕ್ಷ್ಮೀನಾಥಸಮಾರಂಭವಾದುದು, ನಾಥ-ಯಾಮುನಮಧ್ಯಮವಾದದು, ರಾಮಾನುಜಾಚಾರ್ಯಪರ್ಯಂತ ವಾದುದು. ಹೀಗೆ ನಾಥಮುನಿಗಳೂ ಯಾಮುನಾಚಾರ್ಯರೂ ಈ ಸಿದ್ಧಾಂತದ ವಿಕಾಸತದಲ್ಲಿ ಪಟ್ಟಭದ್ರರಾದವರು; ಇವರ ದಾರಿಯನ್ನೇ ರಾಮಾನುಜಾಚಾರ್ಯರು ಹಿಡಿದರು ಎಂದರೆ ತಪ್ಪಾಗದು. ಆದರೆ ಅವರಿಗೆ ಯಾಮುನಾಚಾರ್ಯರ ಸಿದ್ಧಾಂತದ ಪರಿಚಯವಾಗುವ ಮೊದಲೇ ಶಾಸ್ತ್ರಪಾಂಡಿತ್ಯವಿದ್ದಿತು. ಯಾದವಪ್ರಕಾಶರ ಬೞಿ ವೇದಾಂತಗ್ರಂಥಗಳನ್ನು ಓದಿದ್ದರು. ಸ್ವತಂತ್ರವಾಗಿ ಸಿದ್ಧಾಂತವೊಂದನ್ನು ನಿರೂಪಿಸುವ ಸನ್ನಾಹದಲ್ಲಿದ್ದರು. ಶಂಕರಾಚಾರ್ಯರಿಗೂ ಪ್ರಾಚೀನರಾದ ದ್ರವಿಡಾ ಚಾರ್ಯ, ಬೋಧಾಯನ, ಟಂಕ ಮುಂತಾದ ಭಾಷ್ಯಕಾರರ ವಾಙ್ಮಯವನ್ನು ಅರಗಿಸಿಕೊಂಡಿದ್ದರು. ಪರಮತತ್ತ್ವ, ಮುಕ್ತಿ, ಭುಕ್ತಿ, ಯೋಗ, ಸಂಸಾರ (ವಿಷಯ) ಈ ಐದು ಪ್ರಮೇಯಗಳನ್ನು ವಿಸ್ತರಿಸಲು ಪಾಂಚರಾತ್ರ

ಸಂಹಿತೆಯಲ್ಲಿ ವಿಶೇಷವಾದ ಅಭಿಮಾನವನ್ನು ತಳೆದಿದ್ದರು. ಪಾಂಚರಾತ್ರವು ಭಗವತ್ಪ್ರೀತಿಯನ್ನು ಗಳಿಸುವ ಮಾರ್ಗವೆಂದು ಯಾಮುನಾಚಾರ್ಯರೂ ನಂಬಿದ್ದರು.

ಅಂತೂ ದ್ರವಿಡವೈಷ್ಣವವಾಙ್ಮಯ, ಪಾಂಚರಾತ್ರ ಸಂಪ್ರದಾಯ, ಶ್ರುತಿಸ್ಮೃತೀತಿಹಾಸಪುರಾಣಗಳು ಮೂರೂ ಮಾರ್ಗಗಳ ಸಮಾಹಾರವಾಗಿ ಶ್ರೀವೈಷ್ಣವ ಸಿದ್ಧಾಂತವು ಮೈದಳೆಯಿತು. ಇದನ್ನು ಶಾಸ್ತ್ರಗಳಿಂದ, ಯುಕ್ತಿಯಿಂದ, ವಿವರಣೆಗಳಿಂದ ನಿಲ್ಲಿಸಿದವರು ರಾಮಾನುಜಾಚಾರ್ಯರು. ಭಾಷ್ಯಕಾರರೆಂದು ಇವರ ಪ್ರಖ್ಯಾತಿ. ಸಂಪ್ರದಾಯಪ್ರವರ್ತಕರೆನ್ನುವುದಕ್ಕಿಂತ ಸಂಪ್ರದಾಯಸಂವರ್ಧಕರೆನ್ನುವುದು ಸರಿಯಾದುದು. ನಾಥಮುನಿಗಳನ್ನು ಪ್ರವರ್ತಕರೆಂದರೆ ಒಪ್ಪೀತು. ನಾಥಮುನಿಗಳ ಹಿರಿಯರು ಉತ್ತರ ದೇಶದ ಭಾಗವತವೈಷ್ಣವರೆಂದೂ ಪಾಂಚರಾತ್ರಸಂಪ್ರದಾಯದವರೆಂದೂ, ಯಮುನಾ ನದಿಯ ದಡದ ಮೇಲೆ ಇರುತ್ತಿದ್ದು ಕಾರಣಾಂತರದಿಂದ ದಕ್ಷಿಣದೇಶಕ್ಕೆ ವಲಸೆಬಂದರೆಂದೂ ಹೇಳುತ್ತಾರೆ. ಇವರ ತಂದೆಯ ಹೆಸರು ಈಶ್ವರಭಟ್ಟ, ಹುಟ್ಟಿದ ಊರು ಮನ್ನಾರ್‌ಗುಡಿ. ಇವರು **'ನ್ಯಾಯತತ್ತ್ವ'** ಮತ್ತು **'ಯೋಗರಹಸ್ಯ'** ಎಂಬ ಎರಡು ಗ್ರಂಥಗಳನ್ನು ರಚಿಸಿದ್ದಾರೆ. ಶ್ರೀರಂಗದಲ್ಲಿಯೇ ನೆಲೆಸಿದ ಇವರು ಶ್ರೀರಂಗನಾಥನ ದೇವಾಲಯದಲ್ಲಿ ದ್ರಾವಿಡ ಪ್ರಬಂಧಗಳನ್ನು ಪಾರಾಯಣಮಾಡುವ ಪದ್ಧತಿಯನ್ನು ಏರ್ಪಡಿಸಿದರು.

ಯಾಮುನಾಚಾರ್ಯರು

ನಾಥಮುನಿಗಳಿಗೆ ಉಯ್ಯಕೊಂಡರ್ (ಪುಂಡರೀಕಾಕ್ಷ) ಮತ್ತು ಮಣಕ್ಕಾಲ್ ನಂಬಿ (ರಾಮಮಿತ್ರ) ಎಂಬಿಬ್ಬರು ಪ್ರಖ್ಯಾತ ಶಿಷ್ಯರಿದ್ದರು. ಮಣಕ್ಕಾಲ್ ನಂಬಿಯೇ ಯಾಮುನಾಚಾರ್ಯರ ಚೇತನಕ್ಕೆ ಸಂಸ್ಕಾರವನ್ನು ಒದಗಿಸಿದವರು. ಯಾಮುನರು ನಾಥಮುನಿಗಳನ್ನು ತಮ್ಮ **'ಸ್ತೋತ್ರ ರತ್ನ'**ದಲ್ಲಿ ''ಪಿತಾಮಹ'' ಎಂದು ವ್ಯವಹರಿಸಿದ್ದಾರೆ; ಇವರನ್ನು

'ನಾಥಮುನೀಂದ್ರ ಪೌತ್ರ'ರೆಂದೂ ವ್ಯವಹರಿಸುತ್ತಾರೆ. ಇವರ ಗೋತ್ರ ಶಠಮರ್ಷಣ. ತಾರುಣ್ಯದಲ್ಲೇ ಉದ್ದಾಮ ಪಂಡಿತರೆಂದು ಪ್ರಖ್ಯಾತರಾದ ಇವರು ಚೋಳರಾಜನಿಂದ ಅರ್ಧ ರಾಜ್ಯಸನ್ಮಾನವನ್ನು ಪಡೆದಿದ್ದರಂತೆ. ಭೋಗಿಗಳಾಗಿದ್ದ ಇವರನ್ನು ಭಗವದ್ಭಕ್ತಿಯ ಕಡೆ ತಿರುಗಿಸಿದ ಪುಣ್ಯ ಮಣಕ್ಕಾಲ್ ನಂಬಿಯದು. ಅನಂತರ ಇವರು ಸಂನ್ಯಾಸಿಗಳಾಗಿ ಶ್ರೀರಂಗಕ್ಕೆ ಬಂದು ಅಲ್ಲಿ ವೈಷ್ಣವ ಸಮಾಜದ ನಿರ್ವಾಹಕರಾಗಿ ನೆಲೆಸಿದರು. **'ಸ್ತೋತ್ರರತ್ನ', 'ಸಿದ್ಧಿತ್ರಯ', 'ಆಗಮಪ್ರಾಮಾಣ್ಯ', 'ಪುರುಷನಿರ್ಣಯ'** ಮುಂತಾದ ಗ್ರಂಥಗಳನ್ನು ಸಂಸ್ಕೃತದಲ್ಲಿ ರಚಿಸಿದ್ದಾರೆ. ಇವರು ಕೇವಲ ಕವಿಗಳಲ್ಲ, ತಂತ್ರಪಾರಗರಲ್ಲ, ''ಪ್ರತಿವಾದಿವಾರಣಪ್ರಕಟಾಟೋಪವಿಪಾಟನಕ್ಷಮ'' ರೆಂದು ಕೀರ್ತಿವೆತ್ತಿದ್ದರು. ಇವರಿಗೆ ಇಪ್ಪತ್ತೆರಡು ಮಂದಿ ಶಿಷ್ಯರಿದ್ದರಂತೆ. ಇವರಲ್ಲಿ ಮಹಾಪೂರ್ಣ, ಗೋಷ್ಠೀಪೂರ್ಣ, ಕಾಂಚೀಪೂರ್ಣ ಎಂಬುವರು ಪ್ರಸಿದ್ಧರು. ಇವರ ಮಗ ಆಳ್ವಾರ್-ತಿರುವರಂಗಪ್ಪೆರುಮಾಳ್ ಅರಯ್ಯರ್ ಕೂಡಾ ಹೆಸರಾಂತ ಪಂಡಿತರು; ಇವರೇ ರಾಮಾನುಜರನ್ನು ಕಂಚಿಯಿಂದ ಶ್ರೀರಂಗಕ್ಕೆ ಕರೆತಂದವರು. ಚೋಳಮಂಡಲದ ಕುಪ್ಪಂಕುಳಿಯಲ್ಲಿ ಕ್ರಿಸ್ತಾಬ್ದ ೯೧೭ ರಲ್ಲಿ ಹುಟ್ಟಿದ ಯಾಮುನರು ೧೦೪೨ ರಂದು ಶ್ರೀರಂಗದಲ್ಲಿ ತೀರಿಕೊಂಡರು.

ಇವರು ತಾವು ತೀರಿಕೊಳ್ಳುವವರೆಗೂ ಶ್ರೀರಂಗದ ಶ್ರೀವೈಷ್ಣವ ಸಮುದಾಯವನ್ನು ಸಂಘಟಿಸಿ, ಗುಡಿಯ ನಿರ್ವಾಹಕರಾಗಿ, ಗುರುಗಳಾಗಿ, ಮಾರ್ಗದರ್ಶಿಗಳಾಗಿದ್ದರು. ತಮ್ಮ ಅವಸಾನಕಾಲ ಸಮೀಪಿಸಿದುದನ್ನು ಅರಿತು, ಆಗ ಕಂಚಿಯಲ್ಲಿದ್ದ ಲಕ್ಷ್ಮಣಸೂರಿ (ರಾಮಾನುಜ) ಗಳನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಆರಿಸಿದರು. ಶ್ರೀರಂಗಕ್ಷೇತ್ರವು ಶ್ರೀವೈಷ್ಣವರ ಕೇಂದ್ರವಾದುದೂ, ರಂಗನೇ ದೈವವೆಂಬ ಶ್ರದ್ಧೆ ಮೂಡಿದುದೂ ಯಾಮುನಾಚಾರ್ಯರ ಕಾಲದಲ್ಲೇ.

ಬಾಳುವೆ

ರಾಮಾನುಜಾಚಾರ್ಯರ ಜನ್ಮಸ್ಥಳ ಕಂಚಿಯ ಬಳಿ ಇರುವ ಶ್ರೀಪೆರಂಬುದೂರ್ ಎಂಬ ಹಳ್ಳಿ. ಜನ್ಮಸಂವತ್ಸರ ಕ್ರಿಸ್ತಾಬ್ದ ೧೦೧೭. ಆಸೂರಿವಂಶದ ಕೇಶವಭಟ್ಟರು ಇವರ ತಂದೆ; ಆಚಾರ್ಯರ ಚಿಕ್ಕಂದಿನಲ್ಲೇ ತೀರಿಕೊಂಡರು. ರಾಮಾನುಜರ ಪೂರ್ವಾಶ್ರಮದ ಹೆಸರು ಲಕ್ಷ್ಮಣ ಅಥವಾ ಇಳೆಯಪೆರುಮಾಳ್. ಮಗುವಿನ ನಾಮಕರಣವನ್ನು ಯಾಮುನಾ ಚಾರ್ಯರೇ ಮಾಡಿದರಂತೆ. ಸೋದರಮಾವ ತಿರುಮಲೆ-ನಂಬಿ (ಶ್ರೀಶೈಲ ಪೂರ್ಣ) ಎಂಬುವರ ಬಳಿ ಇವರ ಬಾಲ್ಯವಿದ್ಯಾಭ್ಯಾಸ ನಡೆಯಿತು. ತಾರುಣ್ಯದಲ್ಲಿ ವೇದಾಂತ ಪಾಠಕ್ಕೆಂದು ಕಂಚಿಗೆ ಬಂದು ಅಲ್ಲಿ ಯಾದವಪ್ರಕಾಶರೆಂಬ ಅದ್ವೈತಾಚಾರ್ಯರಲ್ಲಿ ಕೆಲವು ಕಾಲ ಶಾಸ್ತ್ರಾಧ್ಯಯನ ಮಾಡಿದರು. ಈ ಯಾದವ ಪ್ರಕಾಶರು ಬ್ರಹ್ಮಸೂತ್ರಗಳ ಮೇಲೆ ತಮ್ಮದೇ ವ್ಯಾಖ್ಯಾನವೊಂದನ್ನು ರಚಿಸಿದ್ದರು. ಭರ್ತೃಪ್ರಪಂಚನೆಂಬ ಪ್ರಾಚೀನ ಅದ್ವೈತವಾದಿಯ ಬ್ರಹ್ಮಪರಿಣಾಮವಾದವನ್ನು ಮೆಚ್ಚಿಕೊಂಡು ಜೀವ (ಚಿತ್) ಜಗತ್ (ಅಚಿತ್) ಮತ್ತು ಈಶ್ವರ ಎಂಬ ಮೂರು ತತ್ತ್ವಗಳೂ ಬ್ರಹ್ಮನ ಪರಿಣಾಮಗಳೇ ಎಂದು ಇವರು ವಾದಿಸಿದ್ದರು. ಯಾದವ ಪ್ರಕಾಶರದ್ದು ಬ್ರಹ್ಮವೊಂದೇ ಸತ್ಯ, ಉಳಿದುದೆಲ್ಲ ಅದರ ಕಾರ್ಯ ಎಂಬ ನಿಲುವು. ಅವರ ಅದ್ವೈತವಾದದಲ್ಲಿ ಚಿತ್, ಅಚಿತ್, ಈಶ್ವರ ಎಂಬ ಮೂರು ತತ್ತ್ವಗಳ ನಡುವೆ ಅತ್ಯಂತ ಭೇದವಿರುವುದೇ ಸಂಸಾರವೆನಿಸಿಕೊಳ್ಳುತ್ತದೆ; ಈ ಭ್ರಾಂತಿಯು ಮರೆಯಾಗುವುದೇ ಮುಕ್ತಿ. ಯಾದವ ಪ್ರಕಾಶರ ನಿಲುವು ರಾಮಾನುಜರಿಗೆ ಸರಿಯೆಂದು ತೋರಲಿಲ್ಲ. ಗುರು-ಶಿಷ್ಯರ ನಡುವೆ ವಿವಾದ ಒದಗಿದ ವಿವರವೂ ಇದೆ. ಅಂತೂ ರಾಮಾನುಜರು ಕಂಚಿಯಲ್ಲೇ ಇರುತ್ತ ಸ್ವತಂತ್ರರಾಗಿದ್ದರು.

ಅವರ ಸೋದರಮಾವ ತಿರುಮಲೆ-ನಂಬಿ (ಶ್ರೀ ಶೈಲಪೂರ್ಣ) ಗೆ ಯಾಮುನಾಚಾರ್ಯರು ಗುರುಗಳು. ಮುದುಕರಾಗಿದ್ದ ಯಾಮುನರು ಶ್ರೀರಂಗದಲ್ಲಿರುತ್ತಿದ್ದಾಗ ನಂಬಿಯು ಅವರ ಆದೇಶದಂತೆ ತಿರುಮಲೆಯನ್ನು ಸೇರಿ ಅಲ್ಲಿ ವೆಂಕಟೇಶ್ವರನ ನಿತ್ಯಕೈಂಕರ್ಯವನ್ನು ನಡೆಸುತ್ತಿದ್ದರು. ತರುಣರಾದ ರಾಮಾನುಜರು ಅಲ್ಲಿಯೇ ಹೋಗಿ ಅವರಿಂದ ರಾಮಾಯಣದ ಅಂತರಾರ್ಥವನ್ನು ಅರಿತರು. ರಾಮಾನುಜರು ಭಕ್ತಿಯ ಭರದಿಂದ ಈ ಬೆಟ್ಟವನ್ನು ಕಾಲಿನಿಂದ ತುಳಿಯಲಿಷ್ಟಪಡದಿರಲು ನಂಬಿಯೇ ಬೆಟ್ಟದಿಂದಿಳಿದು ಅರ್ಧದಾರಿ ಬರುವುದು, ರಾಮಾನುಜರು ಕೆಳತಿರುಪತಿ ಯಲ್ಲಿದ್ದುಕೊಂಡು ನಂಬಿಯು ಬಂದಷ್ಟು ದೂರ ಕೆಳಬೆಟ್ಟವನ್ನೇರಿ ಹೋಗುವುದು, ಅಲ್ಲಿ ಇಬ್ಬರೂ ಕುಳಿತು ಪಾಠವಾರಂಭಿಸುವುದು ಹೀಗೆ ಪಾಠ ಸಾಗಿದ್ದಿತು.

ಈ ವೇಳೆಗೆ ರಾಮಾನುಜರ ಪ್ರತಿಭೆ, ಶೀಲ, ಭಕ್ತಿಗಳ ಯಶಸ್ಸು ದೇಶದಲ್ಲೆಲ್ಲ ಹರಡಿದ್ದಿತು, ಯಾಮುನಾಚಾರ್ಯರನ್ನೂ ಮುಟ್ಟಿದ್ದಿತು. ತಮ್ಮನಂತರ ಶ್ರೀರಂಗದ ಶ್ರೀವೈಷ್ಣವ ಸಮುದಾಯವನ್ನು ನಿರ್ವಹಿಸಲು ಇವರೇ ಶಕ್ತರೆಂದು ಯಾಮುನರು ನಿಶ್ಚಯಿಸಿ, ಅವರನ್ನು ಕಂಚಿಯಿಂದ ಶ್ರೀರಂಗಕ್ಕೆ ಕರೆತರಲು ತಮ್ಮ ಶಿಷ್ಯ ಪೆರಿಯನಂಬಿಯನ್ನು ಕಳುಹಿಸಿದರು. ರಾಮಾನುಜರು ಒಪ್ಪಿ ಹೊರಟರು. ಆದರೆ ಶ್ರೀರಂಗದ ಗಡಿಯನ್ನು ಅವರು ಮುಟ್ಟಿದ ದಿನವೇ ಯಾಮುನರು ತೀರಿಕೊಂಡರೆಂಬ ಸುದ್ದಿ ಬಂದಿತು. ರಾಮಾನುಜರು ಹತಾಶರಾಗಿ ಕಂಚಿಗೆ ಹಿಂದಿರುಗಿದರು. ಆದರೆ ಪೆರಿಯನಂಬಿಯ ಪರಿಚಯವಾಗಿ ಅವರ ಬಳಿ ವೈಷ್ಣವ ಸಿದ್ಧಾಂತವನ್ನು ಕಲಿಯಲು ರಾಮಾನುಜರು ಮತ್ತೆ ಶ್ರೀರಂಗಕ್ಕೆ ಹೊರಟರು. ದಾರಿಯಲ್ಲಿ ಮದುರಾಂತಕಂ ಎಂಬಲ್ಲಿಯೇ ಪೆರಿಯನಂಬಿಯನ್ನು ಕಂಡು ಮಾತುಕತೆ ನಡೆಸಿದರು. ಪೆರಿಯನಂಬಿಯೂ ರಾಮಾನುಜರೂ ಕಂಚಿಗೇ ಬಂದು ಅಲ್ಲಿಯೇ ಪಾಠವನ್ನು ಆರಂಭಿಸಿದರು. ನಾಥಮುನಿಗಳೂ ಯಾಮುನರೂ

ನಿರೂಪಿಸಿದ್ದ ವಿಶಿಷ್ಟಾದ್ವೈತವೇದಾಂತದ ಪ್ರಕ್ರಿಯೆಗಳು ರಾಮಾನುಜರಿಗೆ ಬಂದದ್ದು ಪೆರಿಯನಂಬಿಯಿಂದ.

ಪಾಠಮುಗಿಸಿ ನಂಬಿಯು ಶ್ರೀರಂಗಕ್ಕೆ ಹಿಂದಿರುಗಿದ ಮೇಲೆ ನಾಲ್ಕಾರು ತಿಂಗಳುಗಳನಂತರ ರಾಮಾನುಜರು ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ಯತಿರಾಜರೆಂದು ಪ್ರಸಿದ್ಧರಾದರು. ಕಂಚಿಯಲ್ಲಿ ವರದರಾಜ ಸ್ವಾಮಿಯ ನಿತ್ಯ ಕೈಂಕರ್ಯವನ್ನು ಮಾಡಿಕೊಂಡಿದ್ದ ಕಾಂಚೀಪೂರ್ಣರೆಂಬ ಯಾಮುನರ ಇನ್ನೊಬ್ಬ ಶಿಷ್ಯರೇ ಇವರಿಗೆ ಪಂಚ ಸಂಸ್ಕಾರಗಳನ್ನು ನಡೆಸಿದರೆಂದು ಹೇಳುತ್ತಾರೆ. ರಾಮಾನುಜರಿಗೆ ಮದುವೆಯಾಗಿ ಗೃಹಸ್ಥರಾಗಿದ್ದರು. ಆದರೆ ಗೃಹಿಣಿಯ ಪ್ರತಿಕೂಲಸ್ವಭಾವದಿಂದ ಜುಗುಪ್ಸೆಗೊಂಡು ಒಮ್ಮೆ ಆಕೆ ತೌರುಮನೆಗೆ ಹೋಗಿದ್ದಾಗ ಇವರು ಸಂನ್ಯಾಸಿಯಾಗಿಬಿಟ್ಟರೆಂದು ಒಂದು ವಿವರವಿದೆ.

ಶ್ರೀರಂಗದಲ್ಲಿ ಯಾಮುನರನಂತರ ಶ್ರೀವೈಷ್ಣವರಿಗೆ ಸಮರ್ಥರಾದ ಆಚಾರ್ಯರಿಲ್ಲದೆ ತೊಂದರೆಯಾಗಲು ಹಿರಿಯರೆಲ್ಲ ಸೇರಿ ಯಾಮುನರ ಮಗ ತಿರುವರಂಗಪ್ಪೆರುಮಾಳಯ್ಯರ್ ನನ್ನು ಕಂಚಿಗೆ ಕಳುಹಿಸಿ ರಾಮಾನುಜ ರನ್ನು ಶ್ರೀರಂಗಕ್ಕೆ ಕರೆಯಿಸಿಕೊಂಡರು. ಆಚಾರ್ಯರು ವೈಕಾಸಿ ಮಾಸದ (ಜ್ಯೇಷ್ಠಶುಕ್ಲ) ಪೌರ್ಣಮಿಯಂದು ಶ್ರೀರಂಗಕ್ಕೆ ಬರಲು ಅಲ್ಲಿನ ಶ್ರೀವೈಷ್ಣವರೆಲ್ಲ ಪೆರಿಯನಂಬಿಯನ್ನು ಮುಂದೆ ಮಾಡಿಕೊಂಡು ಬಂದು ಅವರನ್ನು ಮರ್ಯಾದೆಯಿಂದ ಎದುರುಗೊಂಡು ತಮ್ಮ ಸಮುದಾಯದ ನಾಯಕರಾಗಿರುವಂತೆ ಬೇಡಿಕೊಂಡರು. ರಾಮಾನುಜರಿಗೂ ಭಗವಂತ ನಿಂದಲೇ "ಅತ್ರೈವಶ್ರೀರಂಗೇ ಸುಖಮಾಸ್ವ" ಎಂದು ಆಜ್ಞೆಯಾಯಿತಂತೆ. ಅಲ್ಲಿಂದ ಮುಂದೆ ಅರವತ್ತು ವರ್ಷಗಳು ಅವರು ಶ್ರೀರಂಗದಲ್ಲಿಯೇ ಇದ್ದರು. ಇದ್ದಷ್ಟು ಕಾಲವೂ ಅಲ್ಲಿನ ಸಾವಿರಾರು ಶ್ರೀವೈಷ್ಣವ ಗೃಹಸ್ಥರು ಮಾತ್ರವಲ್ಲದೆ, ಏಳು ನೂರು ಜೀಯರ್‌ಗಳು, ಹನ್ನೆರಡುಸಾವಿರ ಏಕಾಂಗಿ ಗಳು, ಎಪ್ಪತ್ತುನಾಲ್ಕು ಆಚಾರ್ಯಪುರುಷರು ಇವರ ಸಮುದಾಯಕ್ಕೆ

ಒಡೆಯರಾಗಿ ಉಳಿದರು. ಶ್ರೀರಂಗದ ಜನ ಇವರನ್ನು 'ಒಡೆಯರು' ಎಂದೇ ವ್ಯವಹರಿಸುತ್ತಿದ್ದರು.

ಬಹುವರ್ಷಗಳು ಇವರು ತಾವೇ ಶ್ರೀರಂಗನಾಥದೇವಾಲಯದ ನಿರ್ವಾಹಕರಾಗಿದ್ದುಕೊಂಡು ಅಲ್ಲಿನ ಪೂಜಾವ್ಯವಸ್ಥೆಗಳನ್ನು ಸರಿಪಡಿಸಿದರು. ಈ ಕೆಲಸದಲ್ಲಿ ಅವರ ಶಿಷ್ಯ ಮುದಲಿಯಾಂಡಾನ್ (ದಾಶರಥಿ) ಎಂಬಾತನು ನೆರವಾದನು. ಶ್ರೀರಂಗದೇವಾಲಯದ ಕಾರುಬಾರು ತುಂಬ ಕೆಟ್ಟಿದ್ದಿತಾಗಿ ರಾಮಾನುಜರ ಕೆಲಸ ಕಷ್ಟವಾಯಿತು. ಆಚಾರ್ಯರ ಕಟ್ಟುಪಾಡುಗಳನ್ನು ಒಪ್ಪದ ಅರ್ಚಕರು ಅವರಿಗೆ ವಿಷವುಣಿಸುವ ಪ್ರಯತ್ನವನ್ನೂ ಮಾಡಿದರು. ದೇವಾಲಯದ ಪುರಾಣಿಕನೂ ಪುರೋಹಿತನೂ ಪ್ರಭಾವಶಾಲಿಯೂ ಆಗಿದ್ದ ಪೆರಿಯಕೋಯಿಲ್‌ನಂಬಿ (ರಂಗಾಮೃತಕವಿ) ಯೆಂಬ ಘನ ವಿದ್ವಾಂಸನು ರಾಮಾನುಜರನ್ನು ಎದುರಿಸಿ ನಿಂತನು. ರಾಮಾನುಜರ ಪರಿಷ್ಕರಣ ಕಾರ್ಯ ಕುಂಠಿತವಾಯಿತು. ಪ್ರತಿಭಟನೆ ವಿಪರೀತವಾಗಿ ಆಚಾರ್ಯರು ಎರಡು ವರ್ಷಗಳ ಕಾಲ ಶ್ರೀರಂಗವನ್ನೇ ಬಿಟ್ಟು ತಿರುವಳ್ಳರೈ ಎಂಬಲ್ಲಿ ಇರಬೇಕಾಯಿತು.

ರಾಮಾನುಜರ ಶಿಷ್ಯ ಕೂರತ್ತಾಳ್ವಾನ್ ಎಂಬುವನು ಈ ರಂಗಾಮೃತ ಕವಿಯನ್ನು ವಾದದಲ್ಲಿ ನಿಗ್ರಹಿಸಿದನಂತರ ಕವಿಯು ರಾಮಾನುಜರ ಶಿಷ್ಯನಾದನು; ಶ್ರೀರಂಗದಲ್ಲಿ ವಿರೋಧವು ತಪ್ಪಿ ಆಚಾರ್ಯರಿಗೆ ಉತ್ತೇಜನ ದೊರೆಯಿತು. ರಾಮಾನುಜರು ಕವಿಯನ್ನು 'ಅಮುದಾನಾರ್' ಎಂದು ಕರೆದು ದೇವಾಲಯದಲ್ಲಿ ದಿವ್ಯಪ್ರಬಂಧಪಾರಾಯಣದ ಮೇಲ್ವಿಚಾರಣೆಗೆ ನಿಯಮಿಸಿದರು. ಇವನು '**ರಾಮಾನುಜನೂತ್ರಂತಾದಿ**'ಯನ್ನು ರಚಿಸಿದ್ದಾನೆ.

ಕ್ರಿಸ್ತಾಬ್ದ ೧೦೭೪ರ ಸುಮಾರಿಗೆ ಆ ಪ್ರದೇಶದ ಪ್ರಭುವಾಗಿದ್ದ ರಾಜರಾಜೇಂದ್ರಕುಲೋತ್ತುಂಗ (ಕ್ರಿಮಿಕಂಠ) ಚೋಳನು ಶೈವಪಕ್ಷಪಾತಿಯಾಗಿ ವೈಷ್ಣವರನ್ನು ನಿರ್ಮೂಲ ಮಾಡಲು ಹವಣಿಸಿದನಂತೆ. ಈ ಜನರ

ಕೇಂದ್ರವಾಗಿದ್ದ ಶ್ರೀರಂಗವನ್ನು ಸದೆಬಡೆದು, ರಂಗನಾಥನ ವಿಗ್ರಹವನ್ನು ಒಡೆದು, ಆಚಾರ್ಯರಾದ ರಾಮಾನುಜರನ್ನು ಸೆರೆಹಿಡಿದು ತರಲು ಈತನು ಬಲವಾದ ಸೇನೆಯೊಂದನ್ನು ಕಳುಹಿಸಿದ್ದನಂತೆ. ಆಗ ರಾಮಾನುಜರು ಗೃಹಸ್ಥರಂತೆ ವೇಷಮರೆಸಿಕೊಂಡು ತಮ್ಮ ಶಿಷ್ಯ ಮುದಲಿಯಾಂಡಾನ್‌ನೊಂದಿಗೆ ಚೋಳಮಂಡಲದಿಂದ ಮೇಲುನಾಡಿಗೆ, ಎಂದರೆ ಮೈಸೂರಿಗೆ, ಓಡಿಬಂದರೆಂದು ಕಥೆಯಿದೆ. ಶ್ರೀರಂಗದೇವಾಲಯವನ್ನು ರಕ್ಷಿಸಲು ನಿಂತ ಪೆರಿಯನಂಬಿ ಮತ್ತು ಕೂರತ್ತಾಳ್ವಾನ್ ಇಬ್ಬರನ್ನೂ ಚೋಳರಾಜನು ಹಿಡಿದು, ಹಿಂಸಿಸಿ, ಕೊಂದನಂತೆ.

ಮೈಸೂರು ಸೀಮೆಯಲ್ಲಿ ಆಚಾರ್ಯರು ಸಾಲಿಗ್ರಾಮ, ತೊಂಡನೂರು ಮಾರ್ಗವಾಗಿ ಮೇಲುಕೋಟೆ (ತಿರುನಾರಾಯಣಪುರ, ಯದುಗಿರಿ)ಗೆ ಬಂದು ಇಲ್ಲಿ ಚೆಲುವರಾಯಸ್ವಾಮಿಯ ಪ್ರತಿಷ್ಠೆ ದೇವಾಲಯದ ಜೀರ್ಣೋದ್ಧಾರಗಳನ್ನು ಮಾಡಿದರೆಂದು ಪ್ರತೀತಿ. ಈ ನಾಡಿನ ದೊರೆಯಾಗಿದ್ದ ಹೊಯ್ಸಳ ಬಿಟ್ಟಿದೇವನು ಮೊದಲಿಗೆ ಜೈನಧರ್ಮದವನೆಂದೂ, ರಾಮಾನುಜಾಚಾರ್ಯರ ಪ್ರಭಾವದಿಂದ ಶ್ರೀ ವೈಷ್ಣವದೀಕ್ಷೆ ತಳೆದು ವಿಷ್ಣುವರ್ಧನನೆಂಬ ಹೆಸರಿನಿಂದ ಬೇಲೂರು ಮುಂತಾದೆಡೆ ವಿಷ್ಣುಮಂದಿರಗಳನ್ನು ಕಟ್ಟಿಸಿದನೆಂದೂ ಕಥೆಯಿದೆ. ಆದರೆ ಮೈಸೂರು ಸೀಮೆಯಲ್ಲಿ ರಾಮಾನುಜರು ಪ್ರವಾಸಮಾಡಿದರೆಂಬುದಕ್ಕಾಗಲೀ ಬಿಟ್ಟಿದೇವನ ಮತಪರಿವರ್ತನೆಗೆ ಅವರು ಕಾರಣರೆಂಬುದಕ್ಕಾಗಲೀ ಸ್ಪಷ್ಟವಾದ, ಸಮರ್ಪಕವಾದ ಐತಿಹಾಸಿಕ ಆಧಾರಗಳಿಲ್ಲ. ದೃಢವಾದ ಪ್ರತೀತಿಯೇನೋ ಹನ್ನೆರಡುವರ್ಷಕಾಲ ಇವರು ಮೇಲುಕೋಟೆಯ ಪರಿಸರದಲ್ಲೆಲ್ಲ ಶ್ರೀ ವೈಷ್ಣವ ಧರ್ಮದ ಪ್ರಚಾರ ಮಾಡಿದರೆಂದು ಹೇಳುತ್ತದೆ. ಮೇಲುಕೋಟೆಯ ದೇವಾಲಯದ ಪೂಜಾವ್ಯವಸ್ಥೆಯನ್ನೂ ಇವರೇ ಮಾಡಿದರಂತೆ.

ಚೋಳಮಂಡಲದಿಂದ ಮೈಸೂರು ಸೀಮೆಗೆ ರಾಮಾನುಜರು ಬಂದವರ್ಷ ಕ್ರಿಸ್ತಾಬ್ದ ೧೦೯೬ ಎಂದೂ, ಆಗ ಅವರಿಗೆ ಎಪ್ಪತ್ತೊಂಬತ್ತು

ವರ್ಷಗಳೆಂದೂ, ಮೇಲುಕೋಟೆಯ ದೇವಾಲಯದ ಜೀರ್ಣೋದ್ಧಾರ ಮಾಡಿದುದು ೧೧೦೦ ರಲ್ಲೆಂದೂ, ಚೋಳರಾಜನು ತೀರಿಕೊಂಡು ಆಚಾರ್ಯರು ಇಲ್ಲಿಂದ ಶ್ರೀರಂಗಕ್ಕೆ ಮರಳಿದುದು ೧೧೧೮ ರಲ್ಲೆಂದೂ ಅಳ್ಕೊಂಡವಿಲ್ಲಿ ಗೋವಿಂದಾಚಾರ್ಯಸ್ವಾಮಿಗಳ ಎಣಿಕೆ. ಎಂದರೆ ಅವರು ಮೈಸೂರು ಸೀಮೆಯಲ್ಲಿದ್ದುದು ಒಟ್ಟು ಇಪ್ಪತ್ತೆರಡು ವರ್ಷಗಳು; ಅವರು ಈ ದೇಶವನ್ನು ಬಿಟ್ಟಾಗ ಅವರ ವಯಸ್ಸು ನೂರೊಂದು ವರ್ಷಗಳು.

ಮೈಸೂರು ಸೀಮೆಯಿಂದ ಶ್ರೀರಂಗಕ್ಕೆ ಬರುವ ದಾರಿಯಲ್ಲಿ ತಿರುಮಲೆ ಬೆಟ್ಟದಮೇಲೆ ವೆಂಕಟೇಶ್ವರನ ಸನ್ನಿಧಿಯಲ್ಲಿ ಕೆಲವು ಕಾಲವಿದ್ದರು. ಆಳ್ವಾರುಗಳಿಂದ ಆರಾಧಿಸಲ್ಪಟ್ಟಿದ್ದ 'ತಿರುವೆಂಕಟಮುಡೈಯನ್' ಆ ಕಾಲಕ್ಕೆ ಶೈವವಾಗಿ, ಅಲ್ಲಿನ ಪೂಜಾಪದ್ಧತಿಯು ತಾಂತ್ರಿಕ ಬಗೆಯದಾಗಿದ್ದಿತಂತೆ. ವೆಂಕಟೇಶ್ವರನ ಸ್ಥಾನಕಮೂಲಮೂರ್ತಿಯು ಸುಬ್ರಹ್ಮಣ್ಯನೆಂದು ಶೈವರೂ, ವಿಷ್ಣುವೆಂದು ವೈಷ್ಣವರೂ ಬಗೆದು ಕಾದಾಡುತ್ತಿದ್ದರಂತೆ. ಆಗ ಅಲ್ಲಿನ ರಾಜನಾಗಿದ್ದ ಘಟ್ಟಿಗ-ಯಾದವರಾಯನು ಈ ವಿವಾದವನ್ನು ಪರಿಹರಿಸಲು ರಾಮಾನುಜರನ್ನು ಆಹ್ವಾನಿಸಿದನಂತೆ. ರಾಮಾನುಜರು ಬಂದು ಆ ಮೂರ್ತಿಯು ವಿಷ್ಣುವೇ ಎಂದು ಸ್ಪಷ್ಟಪಡಿಸಿದರಂತೆ. ಈ ಕಥೆ 'ತಿರುಮಲೈ ಒಳಗು' ಎಂಬ ಗ್ರಂಥದಲ್ಲಿ ಬರುತ್ತದೆ.

ಬರಿದಾಗಿದ್ದ ದೇವರ ಮೇಲುಗೈಗಳೆರಡರಲ್ಲಿ ಬಂಗಾರದ ಶಂಖ ಚಕ್ರಗಳನ್ನು ಮೂಡಿಸಿ ಜೋಡಿಸಿದರೆಂದೂ, ಏಕಮೂರ್ತಿಯಾಗಿದ್ದ ವೆಂಕಟೇಶ್ವರನ ವಕ್ಷಃಸ್ಥಲದಲ್ಲಿ ಅಲರ್ ಮೇಲು ಮಂಗೈ-ನಾಚ್ಚಿಯಾರ್ ಎನಿಸಿಕೊಳ್ಳುವ ದ್ವಿಭುಜ-ವ್ಯೂಹ ಲಕ್ಷ್ಮಿಯ ಮೂರ್ತಿಯನ್ನು ಇಡಿಸಿದರೆಂದೂ, ದೇವರ ಹಣೆಯ ಮೇಲೆ ಊರ್ಧ್ವಪುಂಡ್ರವಿರಬೇಕೆಂಬ ಕಟ್ಟುಪಾಡನ್ನು ಮಾಡಿದರೆಂದೂ ವಿವರಗಳಿವೆ. ಆ ಕಾಲಕ್ಕೆ ಮುಂಚೆ ಉಗ್ರ ಶ್ರೀನಿವಾಸಮೂರ್ತಿಯು ಉತ್ಸವಸಂದರ್ಭಗಳಲ್ಲಿ ಬಳಕೆಯಲ್ಲಿದ್ದಿತೆಂದೂ,

ರಾಮನುಜರು ಇದಕ್ಕೆ ಬದಲಾಗಿ 'ಮಲೆಯಪ್ಪ'ನೆನಿಸಿಕೊಳ್ಳುವ ಭೋಗಶ್ರೀನಿವಾಸಮೂರ್ತಿಯನ್ನು ಬಳಕೆಗೆ ತಂದರೆಂದೂ ಹೇಳುತ್ತಾರೆ. ಅಲ್ಲಿಯವರೆಗೆ ತಿರುಚಾನೂರಿನಲ್ಲಿ ನಡೆಯುತ್ತಿದ್ದ ಬ್ರಹ್ಮರಥೋತ್ಸವವು ತಿರುಮಲೆಯ ಮೇಲೆಯೇ ನಡೆಯುವಂತೆ ಅವರೇ ವ್ಯವಸ್ಥೆಮಾಡಿದರಂತೆ. ಜೀರ್ಣವಾಗಿದ್ದ ಆನಂದ ನಿಲಯ ವಿಮಾನವನ್ನು ಮತ್ತೆ ಕಟ್ಟಿಸಿದವರೂ ಇವರೇ ಎಂದು ವಿವರವಿದೆ. ದೇವಾಲಯದ ಅರ್ಚನಾವಿಧಿಗಳನ್ನು ನೋಡಿಕೊಳ್ಳಲು ಶಠಕೋಪ ಯತಿಯೆಂಬ ಸಂನ್ಯಾಸಿಯನ್ನು ನೇಮಿಸಿ ಏಕಾಂಗಿಗಳಾದ ಅರ್ಚಕರ ವ್ಯವಸ್ಥೆ ಮಾಡಿದರಂತೆ. ತಮ್ಮ ಸೋದರಮಾವ ತಿರುಮಲೆ-ನಂಬಿಯು ನೋಡಿಕೊಳ್ಳುತ್ತಿದ್ದ ದೇವಾಲಯದ ನಂದವನವು ಅವರನಂತರ ಹಾಳುಬಿದ್ದಿದ್ದಿತಾಗಿ ನಂಬಿಯ ಮೊಮ್ಮಗ ತೋಳಪ್ಪತಾತಾಚಾರ್ಯನೆಂಬುವರನ್ನು ನಂದವನದ ನಿರ್ವಹಣೆಗೆ ನಿಯಮಿಸಿದರಂತೆ.

ತಿರುಮಲೆಯ ದೇವಾಲಯಕ್ಕೆ ಇವರು ಸಲ್ಲಿಸಿದ ಸೇವೆಯ ಸ್ಮಾರಕವಾಗಿ ದೇವಾಲಯದ ವಿಮಾನ ಪ್ರದಕ್ಷಿಣೆಯ ಪಥದಲ್ಲಿ ದೇವರ ಎಡಭಾಗಕ್ಕೆ ರಾಮಾನುಜಸನ್ನಿಧಿಯೊಂದು ನಿಂತಿದೆ. ಆಚಾರ್ಯರು ತೀರಿಕೊಂಡ ತರುಣದಲ್ಲೇ ಇದನ್ನು ಪಿಳ್ಳೈ- ತಿರುಮಲೆ-ನಂಬಿ ಎಂಬುವರು ಕಟ್ಟಿಸಿದರಂತೆ. ಈ ದೇವಾಲಯದ ಆವರಣದಲ್ಲಿ ಉಳಿದ ಯಾವ ಆಚಾರ್ಯರಿಗೂ ಆಳ್ವಾರರಿಗೂ ಎಡೆಯಿಲ್ಲ. ಇದು ರಾಮಾನುಜರ ಅದ್ಭುತವಾದ ಪ್ರಭಾವವನ್ನು ತೋರಿಸುತ್ತದೆ.

ತಿರುಮಲೆಯಿಂದ ಹೊರಟು ಆಚಾರ್ಯರು ಆಗ ನಿರಾತಂಕವಾಗಿದ್ದ ಶ್ರೀರಂಗಕ್ಕೆ ಬಂದು ಅಲ್ಲಿ ತಮ್ಮ ಉಳಿದ ಬಾಳನ್ನು ಶಿಷ್ಯಸಂಗ್ರಹ, ದರ್ಶನಪ್ರಸಾರ, ಮತೋದ್ಧರಣ ಕಾರ್ಯಗಳಲ್ಲಿ ಕಳೆದು ಕ್ರಿಸ್ತಾಬ್ದ ೧೧೩೭ ರಲ್ಲಿ ತೀರಿಕೊಂಡರು. ಆಗ ಅವರ ವಯಸ್ಸು ನೂರಿಪ್ಪತ್ತು ವರ್ಷಗಳು.

ಪ್ರಭಾವ

ಇವರ ಶಿಷ್ಯರಲ್ಲಿ ಪ್ರಮುಖರೂ ಪ್ರಭಾವಶಾಲಿಗಳೂ ಆಗಿದ್ದ ಕೂರತ್ತಾಳ್ವಾರರೂ, ಪೆರಿಯನಂಬಿಯೂ ರಾಮಾನುಜರು ಬದುಕಿದ್ದಾಗಲೇ ಚೋಳರಾಜನಿಂದ ಕೊಲ್ಲಲ್ಪಟ್ಟರಷ್ಟೆ. ಕೂರತ್ತಾಳ್ವಾರರ ಮಗ ಪರಾಶರಭಟ್ಟನೆಂಬ ಪ್ರಕಾಂಡ ಪಂಡಿತನು ರಾಮಾನುಜರನಂತರ ಶ್ರೀವೈಷ್ಣವ ಸಮುದಾಯದ ನಾಯಕನಾಗಿ ಸಾಂಘಿಕ, ಧಾರ್ಮಿಕಕಾರ್ಯಗಳನ್ನು ನಿರ್ವಹಿಸಿದನು. ಮೈಸೂರುಕಡೆಯ ನಂಜೀಯರೆಂಬ ಪ್ರಖ್ಯಾತ ವಿದ್ವಾಂಸನನ್ನು ವಾದದಲ್ಲಿ ನಿಗ್ರಹಿಸಿ ಅವನನ್ನು ಶ್ರೀ ವೈಷ್ಣವ ಪಂಥಕ್ಕೆ ಸೆಳೆದುಕೊಂಡನು. ಪರಾಶರಭಟ್ಟನ ತರುವಾಯ ಅವನ ತಮ್ಮ ವೇದವ್ಯಾಸಭಟ್ಟನೂ, ಅವನನಂತರ ನಂಜೀಯರ್ ಪಂಡಿತನೂ, ಅನಂತರ ಕೂರನಾರಾಯಣಜೀಯರ್ ಎಂಬುವನೂ ರಾಮಾನುಜಸಂಪ್ರದಾಯವನ್ನು ಉಳಿಸಿ ಬೆಳೆಸಿದರು. ರಾಮಾನುಜರ ಅಂತೇವಾಸಿಯಾಗಿ ಅವರೊಂದಿಗೇ ಇರುತ್ತಿದ್ದ ಮುದಲಿಯಾಂಡಾನ್ (ದಾಶರಥಿ) ಹತ್ತಾರು ಲಲಿತವಾದ ಪಾಶುರಗಳನ್ನು ರಚಿಸಿ ರಾಮಾನುಜ ದರ್ಶನವನ್ನು ಸ್ಪಷ್ಟಪಡಿಸಿದ್ದಾನೆ. ಆಚಾರ್ಯರ ಬಂಧುವೂ ಶಿಷ್ಯನೂ ಆಗಿದ್ದ ಎಂಬಾರ್ ಎಂಬ ಸಂತನ ಉಪದೇಶದ ಮಾತುಗಳು ಕೂಡ ಆಚಾರ್ಯಸಮಯವನ್ನು ಬೆಳಗುತ್ತವೆ.

ಭಾರತೀಯರ ದರ್ಶನವಾಙ್ಮಯದಲ್ಲಿ ರಾಮಾನುಜರ ಪ್ರಶಸ್ತಿ ಅಜರಾಮರವಾದುದು. ಪ್ರಾಚೀನವೆನಿಸಿದ ವಿಶಿಷ್ಟಾದ್ವೈತ ಪ್ರಮೇಯಗಳನ್ನೇ ಹಿಡಿದು, ಹಿಗ್ಗಿಸಿ, ಸ್ಪಷ್ಟಪಡಿಸಿ, ವಿವರಗಳನ್ನು ವಿಸ್ತರಿಸಿ ಸಿದ್ಧಾಂತವನ್ನು ನಿರೂಪಿಸಿದರು. ದ್ರಾವಿಡ ದಿವ್ಯ ಪ್ರಬಂಧಗಳನ್ನೂ ಶ್ರುತಿಗಳನ್ನೂ ನ್ಯಾಯವನ್ನೂ ಒಂದು ನೆಲೆಯಲ್ಲಿ ನಿಲ್ಲಿಸಿ ದರ್ಶನದ ಒಂದು ಪ್ರಕಾರವನ್ನು ಸಮರ್ಥಿಸಿದರು. ಅವರ **ಶ್ರೀಭಾಷ್ಯ** (ಬ್ರಹ್ಮಸೂತ್ರಗಳಿಗೆ), **ಭಗವದ್ಗೀತಾ ಭಾಷ್ಯ, ವೇದಾಂತಸಾರ, ವೇದಾಂತದೀಪ**ಗಳಲ್ಲಿ ಉಜ್ವಲವಾದ ವೈದುಷ್ಯ

ಸ್ಪಷ್ಟವಾಗುತ್ತದೆ; ನಿಶಿತವಾದ ಬುದ್ಧಿಶಕ್ತಿ ಕಾಣುತ್ತದೆ; ವಾದಕೌಶಲ ಕಾಣುತ್ತದೆ. ಅವರು ರಚಿಸಿದ **ಗದ್ಯತ್ರಯ** (ಶ್ರೀರಂಗಗದ್ಯ, ವೈಕುಂಠಗದ್ಯ, ಶರಣಾಗತಿಗದ್ಯ)ದಲ್ಲಿ ಕವಿಸಹಜವಾದ ಪ್ರತಿಭೆಯಿದೆ. ಅವರ ಮನೋಧರ್ಮ ಮನೋಹರವಾದುದು, ದಿವ್ಯಾನುಭವದ ಕಾಂತಿ ಅವರ ಮಾತುಗಳಲ್ಲಿ ಕಾಣುತ್ತದೆ. ಅವರ ಮಾತಿನಲ್ಲೂ ಮಾಧುರ್ಯವಿದೆ; ಅವರ ಶೈಲಿ ಸುಂದರವಾದುದು.

ಶ್ರೀರಂಗದ ದೇವಾಲಯದಲ್ಲಿ ಪೂಜಾವಸರದಲ್ಲಿ ಧರ್ಮಸೂತ್ರಗಳನ್ನೂ, ವೇದಾಂತಸೂತ್ರಗಳನ್ನೂ, ಆಶ್ವಲಾಯನ-ಆಪಸ್ತಂಬ ಸೂತ್ರಗಳನ್ನೂ, ಮೀಮಾಂಸಾಸೂತ್ರವನ್ನೂ, ಯಾಮುನಾಚಾರ್ಯರ ಸ್ತೋತ್ರರತ್ನವನ್ನೂ ಪಠಿಸುವಂತೆಯೇ ರಾಮಾನುಜರ ಭಾಷ್ಯವನ್ನೂ ಗದ್ಯತ್ರಯವನ್ನೂ ಪಠಿಸುತ್ತಾರೆ. ದಕ್ಷಿಣದೇಶದ ಪ್ರತಿಯೊಂದು ಶ್ರೀವೈಷ್ಣವದೇವಾಲಯದಲ್ಲಿಯೂ ಭಾಷ್ಯಕಾರಸನ್ನಿಧಿಯೆಂದು ರಾಮಾನುಜರ ಪ್ರಭಾವವನ್ನು ನಿಲ್ಲಿಸಿರುವುದು ಕಾಣುತ್ತದೆ; ಈ ಸನ್ನಿಧಿಯಲ್ಲಿಯೇ, 'ಶಾತ್ತುಮುರೈ' ಸೇವೆ ಸಲ್ಲುವುದು. ಆಗಲೇ ನೆರೆದವರೆಲ್ಲ

ಸರ್ವದೇಶದಶಾಕಾಲೇಷ್ವವ್ಯಾಹತ ಪರಾಕ್ರಮಾ ।
ರಾಮಾನುಜಾರ್ಯದಿವ್ಯಾಜ್ಞಾ ವರ್ಧತಾಮಭಿವರ್ಧತಾಮ್ ॥

ರಾಮಾನುಜಾರ್ಯದಿವ್ಯಾಜ್ಞಾ ಪ್ರತಿವಾಸರಮುಜ್ಜ್ವಲಾ ।
ದಿಗಂತವ್ಯಾಪಿನೀ ಭೂಯಾತ್ ಸಾ ಹಿ ಲೋಕಹಿತೈಷಿಣೀ ॥

ಎಂದು ಆಚಾರ್ಯರ ಪ್ರಶಸ್ತಿಯನ್ನು ಹಾಡುತ್ತಾರೆ.

ಅವರ ಅವತಾರಕ್ಷೇತ್ರವಾದ ಶ್ರೀಪೆರಂಬುದೂರಿನಲ್ಲಿ, ಅವರು ಬೆಳೆದು ಓದಿದ ಊರಾದ ಕಂಚಿಯಲ್ಲಿ, ಅವರ ಮುಖ್ಯ ಕಾರ್ಯಕ್ಷೇತ್ರವಾದ ಶ್ರೀರಂಗದಲ್ಲಿ, ಅವರು ಉದ್ಧಾರಮಾಡಿದ ಮೇಲುಕೋಟೆಯಲ್ಲಿ, ಅವರ

ನಿರ್ಮಾಣವೇ ಆದ ಕೆಳತಿರುಪತಿಯಲ್ಲಿ, ತಿರುಮಲೆಬೆಟ್ಟವೇರುವಾಗ ಮೊಳಕಾಲಮುರಿವ ಮೆಟ್ಟಿಲ ಬಳಿ, ಬೆಟ್ಟದ ಮೇಲೆ ವೇಂಕಟೇಶ್ವರನ ಸಾನ್ನಿಧ್ಯದಲ್ಲಿ ರಾಮಾನುಜರ ಮೂರ್ತಿಗಳನ್ನು ಪ್ರತಿಷ್ಠೆಮಾಡಿಸಿ ಅವರ ಸ್ಮೃತಿಯನ್ನು ಅವರ ಸಾಕ್ಷಾಚ್ಛಿಷ್ಯರು ಸನ್ಮಾನಿಸಿದ್ದಾರೆ. ಶ್ರೀ ಪೆರಂಬುದೂರಿನಲ್ಲಿ ಅವರ ಜನ್ಮತಳೆದ ಸ್ಥಳದಲ್ಲಿ ಮಾಡಿಟ್ಟಿರುವ ಮೂರ್ತಿಯು ಮುಂಭಾಗಮಾತ್ರ ಕಡೆದ ಶಿಲಾಶಿಲ್ಪ. ಅವರು ತೀರಿಕೊಂಡ ಸಮಯದಲ್ಲಿಯೇ ಇದು ಸಿದ್ಧವಾಯಿತಂತೆ. ತಿರುಮಲೆ ದೇವಾಲಯದಲ್ಲಿರುವ ಲೋಹವಿಗ್ರಹವು ಅವರ ಜೀವಿತಕಾಲದಲ್ಲಿಯೇ ಮಾಡಿದ ಪ್ರತಿಕೃತಿಯೆಂದು ಪ್ರತೀತಿ. ಈ ಮೂರ್ತಿಯು ಸಾಮಾನ್ಯವಾಗಿರುವಂತೆ ಅಂಜಲಿಬದ್ಧ ಮುದ್ರೆಯಲ್ಲಿರದೆ ವ್ಯಾಖ್ಯಾನ ಮುದ್ರೆಯಲ್ಲಿರುವುದೊಂದು ವಿಶೇಷ.

ಕ್ರಿಸ್ತಾಬ್ದ ೧೨೬೮ರಲ್ಲಿ ಜನ್ಮವೆತ್ತಿ ತಮ್ಮ ಕಾರ್ಯದಿಂದಲೂ ಗ್ರಂಥಗಳಿಂದಲೂ ಶ್ರೀವೈಷ್ಣವಪಂಥವನ್ನೂ ರಾಮಾನುಜದರ್ಶನವನ್ನೂ ಉದ್ಧಾರಮಾಡಿದ ವೇಂಕಟನಾಥಾಚಾರ್ಯರು (ವೇದಾಂತದೇಶಿಕರು) ರಾಮಾನುಜರ ವಿಚಾರವಾಗಿ ಸ್ವಾರಸ್ಯವಾದ ಒಂದು ರೂಪಕವನ್ನು ಕಟ್ಟಿದ್ದಾರೆ. ಭಗವಂತನು ಜೀವರನ್ನು ಉದ್ಧಾರಮಾಡುವುದಿರಲಿ; ಭಗವಂತನನ್ನೇ ಆಚಾರ್ಯರು ಉದ್ಧಾರಮಾಡಿದರಂತೆ! ಕೆಟ್ಟದೃಷ್ಟಿಗಳೆಂಬ ಹಳ್ಳದಲ್ಲಿ ಬಿದ್ದು ಅಸಹಾಯಕನಾಗಿ ಒದ್ದಾಡುತ್ತಿದ್ದ ಪರಬ್ರಹ್ಮನನ್ನು ರಾಮಾನುಜರು ಕೈಹಿಡಿದು ಮೇಲೆತ್ತಿ ಬದುಕಿಸಿದರಂತೆ.

ಕುದೃಷ್ಟಿಕುಹನಾಮುಖೇ ವಿನಿಪತತೋ ಪರಬ್ರಹ್ಮಣಃ ।
ಕರಗ್ರಹವಿಚಕ್ಷಣೋ ಜಯತಿ ಲಕ್ಷ್ಮಣೋಽಯಂ ಮುನಿಃ ॥

★★★

ಅವರ ದರ್ಶನ

ತತ್ತ್ವತ್ರಯ

ರಾಮಾನುಜರ ವಿದ್ಯಾಗುರುಗಳಾದ ಯಾದವಪ್ರಕಾಶರು ಬ್ರಹ್ಮ, ಚಿತ್, ಅಚಿತ್ ಎಂಬ ಮೂರು ತತ್ತ್ವಗಳನ್ನೂ, ಪರಿಣಾಮವಾದವನ್ನೂ ಒಪ್ಪಿಕೊಂಡಿದ್ದರು. ಇದು ಭೋಧಾಯನರಂಥ ಪ್ರಾಚೀನ ದಾರ್ಶನಿಕರು ನಿರೂಪಿಸಿದ್ದ ನಿಲುವೆಂದು ತಿಳಿದುಬರುತ್ತದೆ. ನಾಥಮುನಿಗಳೂ, ಯಾಮುನ ಮುನಿಗಳೂ, ರಾಮಾನುಜ ಮುನಿಗಳೂ ಈ ದೃಷ್ಟಿಯನ್ನೇ ಹಿಡಿದು 'ವಿಶಿಷ್ಟಾದ್ವೈತ' ಸಿದ್ಧಾಂತವನ್ನು ಪ್ರತಿಪಾದಿಸಿದರು. 'ವಿಶಿಷ್ಟಾದ್ವೈತ'ವೆಂಬ ಮಾತಿನಲ್ಲಿ ಬ್ರಹ್ಮನು ಅದ್ವೈತ (ಅದ್ವಿತೀಯ)ವಾದರೂ ಚಿದಚಿದ್ವಿಶಿಷ್ಟನೆಂದು ವಿವರವಿದೆ.

ಈ ಸಿದ್ಧಾಂತದ ಪ್ರಕಾರ ತತ್ತ್ವಗಳು ಮೂರು: ಈಶ್ವರ (ಬ್ರಹ್ಮ), ಚಿತ್ (ಜೀವ) ಮತ್ತು ಅಚಿತ್ (ಪ್ರಕೃತಿ). ಇವು ಮೂರೂ ಸತ್ಪದಾರ್ಥಗಳೇ ಆದರೂ ಅವುಗಳ ನಡುವೆ ಅಪೃಥಕ್ಸಿದ್ಧಸಂಬಂಧವಿದೆ. ಮೂರನ್ನೂ ಸೇರಿಸಿ ತತ್ತ್ವಸಮಾಹಾರವನ್ನು ಹೇಳಿ ಅವಿಕಾರವಾದ ತತ್ತ್ವವು ಬ್ರಹ್ಮವೊಂದೇ ಎಂದು ಹೇಳುವುದರಲ್ಲಿ ಅದ್ವೈತವಾದದ ಭಾಸವಿದೆ. ಈಶ್ವರನನ್ನು ಬಿಟ್ಟು ಚಿತ್ತಾಗಲೀ ಅಚಿತ್ತಾಗಲೀ ನಿಲ್ಲುವುದು ಸಾಧ್ಯವಿಲ್ಲ. ನಮ್ಮ ಆತ್ಮಕ್ಕೆ ಶರೀರವು ಹೇಗೋ ಹಾಗೆ ಈಶ್ವರನಿಗೆ ಚಿದಚಿತ್ತುಗಳು ಶರೀರ; ಅವನು ಶರೀರಿ. ಆದರೆ ಚಿದಚಿತ್ತುಗಳನ್ನು ಬಿಟ್ಟು ಈಶ್ವರನೂ ಇರುವಹಾಗಿಲ್ಲ. ಅವನು ಯಾವಾಗಲೂ ಚಿದಚಿದ್ವಿಶಿಷ್ಟನೇ. ಇದೇ ವಿಶೇಷ. ಈಶ್ವರನ ಅದ್ವೈತವು ಹೀಗೆ ವಿಶಿಷ್ಟವಾದ ಅದ್ವೈತ, ಚೇತನಾಚೇತನಗಳಿಂದ ವಿಶಿಷ್ಟನಾದ ಬ್ರಹ್ಮನನ್ನು ಹೇಳುವ ಸಿದ್ಧಾಂತವೇ ವಿಶಿಷ್ಟಾದ್ವೈತ.

ಬ್ರಹ್ಮನು ಏಕಮೇವಾದ್ವಿತೀಯನೆಂದು ಶ್ರುತಿಗಳು ಹೇಳುತ್ತವೆ. ವ್ಯವಹಾರದಲ್ಲಿ ನಾವು 'ಒಬ್ಬ ರಾಜನಿದ್ದಾನೆ' ಎಂದು ಹೇಳುವುದಿಲ್ಲವೆ?

ರಾಜನೊಬ್ಬನೇ ನಿಜ, ಆದರೆ ರಾಜನೆಂದೊಡನೆ ಅವನ ರಾಣಿ, ಸೇನಾಧಿಪತಿ, ಆಳು-ಕಾಳು, ಅಧಿಕಾರಿಗಳು, ಅರಮನೆ ಎಲ್ಲವೂ ಸೇರುತ್ತವೆ. ಒಂದು ದೃಷ್ಟಿಯಿಂದ ಏಕತ್ತ್ವವಾದರೆ ಮತ್ತೊಂದು ದೃಷ್ಟಿಯಿಂದ ನಾನಾತ್ವ. ಪರಿವಾರಗಳಿಂದ ವಿಶಿಷ್ಟನಾದ ರಾಜನಿರುವಂತೆಯೇ ಚಿದಚಿದ್ವಿಶಿಷ್ಟ ನಾದ ಬ್ರಹ್ಮ. 'ನಾನಾಭೂತಚಿದಚಿದ್ವಸ್ತುಪ್ರಕಾಶದಿಂದ ನಾನಾತ್ವ' ಎಂದು ವಿಶಿಷ್ಟಾದ್ವೈತದ ಪ್ರಕ್ರಿಯೆ.

ಈಶ್ವರನು ಜಗತ್ತಿಗೆ ಉಪಾದಾನಕಾರಣನೂ ಹೌದು, ನಿಮಿತ್ತ-ಕಾರಣನೂ ಹೌದು. ಮಡಕೆಗೆ ಮಣ್ಣು ಉಪಾದಾನ-ಕಾರಣ, ಕುಂಬಾರ ನಿಮಿತ್ತ-ಕಾರಣ. ಬ್ರಹ್ಮನೇ ಜಗತ್ತಾಗಿ ಪರಿಣಮಿಸುವುದರಿಂದ ಬ್ರಹ್ಮನು ಉಪಾದಾನ-ಕಾರಣ; ಅವನ ಇಚ್ಛೆಯು ಜಗತ್ತನ್ನು ಉಂಟುಮಾಡುವುದ ರಿಂದ ನಿಮಿತ್ತ-ಕಾರಣ. ಚಿದಚಿತ್ತುಗಳು ಸ್ಥೂಲವಾಗಿ ಪರಿಣಮಿಸಿದರೆ ಅದು ಕಾರ್ಯಾವಸ್ಥೆ ಎನಿಸಿಕೊಳ್ಳುತ್ತದೆ; ಅದೇ ಸೃಷ್ಟಿ. ಅವು ಸೂಕ್ಷ್ಮವಾಗಿ ಪರಿಣಮಿಸಿದರೆ ಅದು ಕಾರಣಾವಸ್ಥೆ; ಲಯ. ಸೃಷ್ಟಿಸ್ಥಿತಿಲಯಾತ್ಮಕವಾದ ಜಗತ್ತು ಅನಿತ್ಯವಾದರೂ ಮಿಥ್ಯೆಯೆನ್ನಲಾಗದು. ಅನವರತವೂ ಪರಿಣಾಮ-ಶೀಲವಾದುದರಿಂದ ಅದನ್ನು 'ಪ್ರವಾಹತಃ ನಿತ್ಯ'ವೆಂದು ವ್ಯವಹರಿಸುತ್ತಾರೆ. ಕರ್ಮದಿಂದ ಉಂಟಾದ ಸಂಸಾರದ ವಶದಲ್ಲಿಯೇ ಬ್ರಹ್ಮನಿಂದ ಕೀಟದವರೆಗೂ ಇರುವ ಎಲ್ಲ ಪ್ರಾಣಿಗಳೂ ಇರುತ್ತವೆ. (ಆ ಬ್ರಹ್ಮಸ್ತಂಬ ಪರ್ಯಂತಾ ಜಗದಂತರ್ವ್ಯವಸ್ಥಿತಾಃ, ಪ್ರಾಣಿನಃ ಸರ್ವೇ ಕರ್ಮಜನಿತ ಸಂಸಾರವಶವರ್ತಿನಃ). ತ್ರಿಗುಣಾತ್ಮಕವಾದ, ಪರಿಣಾಮಶೀಲವಾದ ಜಗತ್ತು ಈಶ್ವರನ 'ಲೀಲಾವಿಭೂತಿ' ಯೆನಿಸಿಕೊಳ್ಳುತ್ತದೆ.

ಈಶ್ವರನಲ್ಲಿ ಶ್ರೀ ತತ್ತ್ವವು ಅವಿನಾಭಾವಸಂಬಂಧದಿಂದ ಸೇರಿರುತ್ತದೆ; ಲಕ್ಷ್ಮಿಯು ಈಶ್ವರತತ್ತ್ವದಲ್ಲಿ ಅಂತರ್ಗತಳು. ಈ ದೃಷ್ಟಿಯಿಂದಲೂ ಈಶ್ವರನನ್ನು ಶ್ರೀನಿವಾಸನೆಂದು ವ್ಯವಹರಿಸುತ್ತಾರೆ. ಲಕ್ಷ್ಮಿಯು ದಯಾ

ಸ್ವರೂಪಿಣಿ; ಈಶ್ವರನ ಪುರುಷಕಾರವೂ ಇವಳದ್ದೇ ಎಂದು ಕೆಲವರ ಅಭಿಪ್ರಾಯ. ಅಂತೂ ಈ ದಿವ್ಯದಂಪತಿಗಳು ಇಬ್ಬರೂ ಸೇರಿ ಜಗತ್ಕಾರಣ ವಾಗುತ್ತಾರೆ, ಜಗನ್ನಿಯಾಮಕರಾಗುತ್ತಾರೆ. ಈ ಲೋಕ ದಂಪತಿಗಳಿಗೆ ಚಿದಚಿತ್ತುಗಳು ದೇಹ (ಲಕ್ಷ್ಮ್ಯಾ ಸಹ ಹೃಷೀಕೇಶೋ ದೇವ್ಯಾ ಕಾರುಣ್ಯ ರೂಪಯಾ। ರಕ್ಷಕಃ ಸರ್ವ ಸಿದ್ಧಾಂತೇ ವೇದಾಂತೇಷು ಚ ಗೀಯತೇ).

ಈಶ್ವರನಿಗೆ ಲಕ್ಷ್ಮೀಪತಿತ್ವ, ಜಗತ್ಕಾರಣತ್ವ, ಸತ್ತಾಸ್ಥಿತಿ ನಿಯಮನತ್ವ, ಸತ್ಯತ್ವ, ಕಲ್ಯಾಣಗುಣಾಕರತ್ವ, ಸಹಜ ಕಾರುಣಿಕತ್ವ, ವಾತ್ಸಲ್ಯ, ಸೌಶೀಲ್ಯ, ಸೌಲಭ್ಯ, ಜ್ಞಾನ, ಆನಂದ, ಅಮಲ ಈ ಮುಂತಾದ ಗುಣಗಳುಂಟು. ಕೆಲವು ಶ್ರುತಿಗಳು ಈಶ್ವರ ಅಥವಾ ಬ್ರಹ್ಮನನ್ನು 'ನಿರ್ಗುಣ'ಎಂದು ಬಣ್ಣಿಸುತ್ತವೆ, ನಿಜ. ಆದರೆ ಇಲ್ಲಿ 'ನಿರ್ಗುಣ' ಎಂದರೆ 'ಹೇಯಗುಣರಹಿತ' ಎಂದಷ್ಟೇ ಅರ್ಥ. ಜೀವಕೋಟಿಗೆ ಅನುಗ್ರಹಮಾಡಲು ಅಗತ್ಯವಾದ ಸರ್ವಶಕ್ತಿತ್ವ, ಸ್ವಾತಂತ್ರ್ಯ, ಕಾರುಣ್ಯ ಮುಂತಾದ ಗುಣಗಳೇ ಈ ಪರತತ್ತ್ವದ ಮುಖ್ಯಲಕ್ಷಣಗಳು. ಮನುಷ್ಯನ ಅನುಭವಕ್ಕೆ, ಧ್ಯಾನಕ್ಕೆ ಗಮ್ಯನಾಗಿ ಒದಗುವ ಸೌಲಭ್ಯವೂ ಈಶ್ವರನಿಗುಂಟು. ಜೀವರಿಗೆ ಇವನೇ ಅಂತರ್ಯಾಮಿ.

ಚಿದಚಿತ್ತುಗಳಿಗೆ ಅವನೇ ಆತ್ಮ (ಶರೀರಿ) ನಾಗಿರವುದರಿಂದ ಈ ಕರ್ತವ್ಯನಿರ್ವಹಣಕ್ಕಾಗಿ ಧಾರ್ಯತ್ವ, ನಿಯಾಮಕತ್ವ, ಶೇಷಿತ್ವ ಈ ಗುಣಗಳೂ ಅವನಿಗುಂಟು. ಈಶ್ವರನಿಗೂ ಜೀವನಿಗೂ ಇರುವ ಸಂಬಂಧವನ್ನು ಒಂಭತ್ತು ಬಗೆಗಳಲ್ಲಿ ನಿರೂಪಿಸುತ್ತಾರೆ–

(೧) ಈಶ್ವರನು ಶರೀರಿ, ಜೀವನು ಶರೀರ;
(೨) ಈಶ್ವರನು ಶೇಷಿ, ಜೀವನು ಶೇಷ;
(೩) ಈಶ್ವರನು ಆಧಾರ, ಜೀವನು ಆಧೇಯ;
(೪) ಈಶ್ವರನು ರಕ್ಷಕ, ಜೀವನು ರಕ್ಷ್ಯ (ರಕ್ಷಿಸಲ್ಪಡುವವನು);
(೫) ಈಶ್ವರನು ತಂದೆ, ಜೀವನು ಮಗ ;

(೬) ಈಶ್ವರನು ಗಂಡ, ಜೀವನು ಹೆಂಡತಿ;
(೭) ಈಶ್ವರನು ಸ್ವಾಮಿ, ಜೀವನು ಭೃತ್ಯ;
(೮) ಈಶ್ವರನು ಭೋಕ್ತೃ (ಭೋಗಿಸುವವನು) ಜೀವನು ಭೋಗ್ಯ (ಭೋಗಿಸಲ್ಪಡುವವನು);
(೯) ಈಶ್ವರನು ಜ್ಞೇಯ (ತಿಳಿಯಲ್ಪಡಬೇಕಾದವನು) ಜೀವನು ಜ್ಞಾತೃ (ತಿಳಿಯುವವನು).

ಪಿತಾ ಚ ರಕ್ಷಕಃ ಶೇಷೀಭರ್ತಾ ಜ್ಞೇಯೋ ರಮಾಪತಿಃ ।
ಸ್ವಾಮ್ಯಾಧಾರೋ ಮಹಾತ್ಮಾ ಚ ಭೋಕ್ತಾ ಚಾ ಚಾರ್ಯಮತೋಽಚಿತಃ॥

ಮೇಲೆ ಹೇಳಿದ ಗುಣಗಳಲ್ಲದೆ ಈಶ್ವರನಿಗೆ ಪರ, ವ್ಯೂಹ, ವಿಭವ, ಹಾರ್ದ, ಅರ್ಚ ಎಂಬ ಪಂಚಮೂರ್ತಿತ್ವವೂ ಉಂಟು. ಪರವೆನ್ನುವುದು ಮೂಲವಿರಾಟ್ ಮೂರ್ತಿ (ವಿಷ್ಣು). ವ್ಯೂಹವೆಂದರೆ ಸೃಷ್ಟಿ-ಸ್ಥಿತಿ-ಲಯಗಳ ಹೊಣೆಯನ್ನು ಹೊತ್ತ ಮೂರ್ತಿ (ಪ್ರದ್ಯುಮ್ನ). ವಿಭವವೆನ್ನುವುದು ಜಗನ್ನಿಯಾಮಕಮೂರ್ತಿ (ಸಂಕರ್ಷಣ). ಹಾರ್ದವೆಂದರೆ ಅಂತರ್ಯಾಮಿ (ಅನಿರುದ್ಧ). ಅರ್ಚಾಮೂರ್ತಿಯು ಉಪಾಸನೆಗೆ, ನಿದಿಧ್ಯಾಸನಕ್ಕೆ ಒದಗುವ ಮೂರ್ತಿ (ವಾಸುದೇವ). ಶ್ರೀ ವೈಷ್ಣವ ದೇವಾಲಯಗಳಲ್ಲಿ ಐದು ಮೂರ್ತಿಗಳನ್ನು ವ್ಯವಸ್ಥೆ ಪಡಿಸಿರುವುದನ್ನು ಕಾಣಬಹುದು. ಇದು ಪಂಚಮೂರ್ತಿತ್ವದ ಆಧಾರದ ಮೇಲೆಯೇ. ಮೂಲಬೇರ (ಧ್ರುವ ಮೂರ್ತಿ), ಸ್ನಪನಬೇರ, ಉತ್ಸವಬೇರ, ಕೌತುಕಬೇರ (ಭೋಗಮೂರ್ತಿ), ಬಲಿಬೇರಗಳು ಕ್ರಮವಾಗಿ ಪರ, ವ್ಯೂಹ, ವಿಭವ, ಅರ್ಚಾ, ಹಾರ್ದಗಳನ್ನು ಸಂಕೇತಿಸುತ್ತದೆ. ನಾವು ಪೂಜೆಮಾಡುವ ಶ್ರೀನಿವಾಸ (ವೇಂಕಟೇಶ್ವರ), ರಂಗನಾಥ ಮುಂತಾದುವೆಲ್ಲ ಅರ್ಚಾವತಾರಗಳು.

ಈಶ್ವರನು ನಿಯಾಮಕ, ಆಧಾರನಾದರೆ ಚಿದಚಿತ್ತುಗಳು ನಿಯಾಮ್ಯ, ಆಧೇಯ; ಅವನ ನಿಯಮಕ್ಕೆ ಒಳಪಟ್ಟುವು, ಅವನಲ್ಲಿಯೇ ನಿಂತವು.

ಅಚಿತ್ ಎಂಬುದು ಪ್ರಕೃತಿ ತತ್ತ್ವ; ಇದರಲ್ಲಿ ಸತ್ತ್ವ, ರಜಸ್, ತಮಸ್ ಎಂಬ ಮೂರು ಗುಣಗಳೂ ಕಾಲವೂ ಸೇರುತ್ತವೆ. ಚಿತ್ ಎಂದರೆ ಜೀವ. ಇದರ ಎರಡು ಮುಖ್ಯಲಕ್ಷಣಗಳು ಜ್ಞಾನಕ್ಕೆ ಆಶ್ರಯವಾಗಿರುವುದು (ಚೇತನತ್ವ), ಮತ್ತು ತನಗೆ ತಾನೆಂದು ತೋರುವುದು (ಪ್ರತ್ಯಕ್ತ್ವ). ವೇದಾಂದದೇಶಿಕರು ಎರಡನೆಯ ಲಕ್ಷಣವನ್ನು ಕುರಿತು ತಮ್ಮ '**ರಹಸ್ಯತ್ರಯಸಾರ**' ದಲ್ಲಿ "ತನಕ್ಕು ತಾನ್ ತೋತ್ತುಕ್ಕೈ ನಾನೆನ್ರು ತೋತ್ತುಂ" ಎಂದು ಹೇಳಿದ್ದಾರೆ. ಈ ಎರಡು ಲಕ್ಷಣಗಳು ಈಶ್ವರನಿಗೂ ಉಂಟು. ಈಶ್ವರನಂತೆಯೇ ಜೀವನು ಅಣು, ಅವನ ಜ್ಞಾನ ವಿಭು; ಅವನಿಗೂ ಜ್ಞಾನ, ಆನಂದ, ಅಮಲ ಈ ಗುಣಗಳಿವೆ. ತನ್ನ ನೈಜಸ್ಥಿತಿಯಲ್ಲಿ ಜ್ಞಾನದ ವಿಕಾಸವಿದ್ದರೂ ಪ್ರಕೃತಿಸಂಸರ್ಗದಿಂದಲೂ ಕರ್ಮಗಳಿಂದಲೂ ಜ್ಞಾನವು ಸಂಕುಚಿತವಾಗುತ್ತದೆ; ಪರಿಶುದ್ಧನಾಗಿದ್ದವನು ಮ್ಲಾನನಾಗುತ್ತಾನೆ. ಹೀಗೆ ತನ್ನ ಸ್ವರೂಪವು ಮರೆಯಾಗುವುದೇ ಸಂಸಾರ, ತನ್ನ ಸ್ವರೂಪ ಮತ್ತೆ ಮೈದಳೆಯುವುದೇ ಮುಕ್ತಿ. ಸ್ವಸ್ವರೂಪತಿರೋಧಾನವು ಸಂಸಾರ ಬಂಧನ; ಸ್ವಸ್ವರೂಪಾವಿರ್ಭಾವವು ಮುಕ್ತಿ.

ಜೀವರು ಅನಂತ ಸಂಖ್ಯೆಯಲ್ಲಿದ್ದಾರೆ. ಭೇದರಹಿತವಾದ ಜ್ಞಾನದಿಂದ ಎಲ್ಲ ಜೀವರೂ ಏಕಾಕಾರವಾಗಿದ್ದರೂ ಅವರಲ್ಲಿ ಸಾಮ್ಯವಿಲ್ಲ. ಆದರೆ ಎಲ್ಲ ಜೀವರೂ ಭಗವಚ್ಛೇಷಿಗಳು, ಎಂದರೇ ಭಗವಂತನೇ ತಮ್ಮ ಶೇಷಿಯಾಗಿ ಉಳ್ಳವರು.

ಶೇಷಿಯೆಂದರೆ ಸ್ವಾಮಿಯಾದ ಭೋಕ್ತೃ; ಶೇಷವೆಂದರೆ ದಾಸಭೂತ ನಾಗಿರುವ 'ಭೋಗ್ಯವಸ್ತು'. ಜೀವರೆಲ್ಲರೂ ಶೇಷರು. ಅವರು ಭಗವದಾತ್ಮರು, ಎಂದರೆ ಭಗವಂತನೇ ತಮ್ಮ ಆತ್ಮವಾಗಿ ಉಳ್ಳವರು. ಈಶ್ವರನು ಶರೀರಿ, ಜೀವವು ಶರೀರ ಅಥವಾ ಪ್ರಕಾರ. ಶರೀರವೆಂದರೆ

"ಯಸ್ಯ ಚೇತನಸ್ಯ ಯತ್ ದ್ರವ್ಯಂ ಸರ್ವಾತ್ಮನಾ ಸ್ವಾರ್ಥೇ ನಿಯಂತುಂ ಧಾರಯಿತುಂ ಚ ಶಕ್ಯಂ, ಯತ್ ಶೇಷತಾ-ಏಕಸ್ವರೂಪಂ ಚ, ತತ್‌ತಸ್ಯ ಶರೀರಂ"

ಎಂದು ರಾಮಾನುಜರ ವಿವರಣೆ. ಚೇತನವು ತನ್ನ ಪ್ರಯೋಜನಕ್ಕಾಗಿ ಯಾವುದನ್ನು ಧರಿಸಿ, ನಿಯಮನ ಮಾಡಲು ಸಾಧ್ಯವೋ ಆ ದ್ರವ್ಯವೇ ಶರೀರ; ಯಾವುದು ಧರಿಸಿ ನಿಯಮನಮಾಡುವುದೋ ಅದು ಶರೀರಿ ಅಥವಾ ಆತ್ಮ. ಈಶ್ವರನು ತನ್ನ ಲೀಲಾಸಂಕಲ್ಪದಿಂದ ಎಲ್ಲ ಜೀವರನ್ನೂ ಧರಿಸಿ, ನಿಯಮನ ಮಾಡುತ್ತಾನೆ. ಎಲ್ಲ ಜೀವರೂ ಈಶ್ವರನಿಗೆ ಪರತಂತ್ರರು; ಈಶ್ವರನೊಬ್ಬನೇ ಸ್ವತಂತ್ರ. ಹೀಗೆ ಭಗವಚ್ಛೇಷಿತ್ವ, ಭಗವದಾತ್ಮತ್ವ, ಪಾರತಂತ್ರ್ಯ ಇವು ಎಲ್ಲ ಜೀವರಿಗೂ ಸಮಾನವಾದ ಲಕ್ಷಣಗಳು.

ತ್ರಿವಿಧ ಚೇತನರು

ಜೀವರಲ್ಲಿ ಮೂರು ಬಗೆ : ಬದ್ಧರು, ಮುಕ್ತರು, ನಿತ್ಯರು ಎಂದು. ಬದ್ಧರೆಂದರೆ ನಮ್ಮಂಥ ಪ್ರಾಕೃತಜನ, ಅನುವೃತ್ತ ಸಂಸಾರಿಗಳು, ಶರೀರೇಂದ್ರಿಯಗಳಲ್ಲಿ ಬದ್ಧರಾದವರು. ತ್ರಿಗುಣಾತ್ಮಕವಾದ, ಪರಿಣಾಮಶೀಲ ವಾದ, ಸೃಷ್ಟಿ ಸ್ಥಿತಿ ಲಯಗಳಿಗೆ ಒಳಪಟ್ಟ ಲೀಲಾವಿಭೂತಿಯಲ್ಲಿ ಇರುವಂಥ ಇವರಲ್ಲಿ ಬ್ರಹ್ಮನಿಂದ ಕೀಟದವರೆಗೆ ಅನಂತವಿಭಾಗಗಳಿವೆ (ಬ್ರಹ್ಮಾದಿ ಸ್ತಂಬ ಪರ್ಯಂತ ವಿಭಾಗಗಳು). ಇವರಿಗೆ ಒದಗಿದ ಪ್ರಕೃತಿ ಸಂಬಂಧದಿಂದಾಗಿ ತಮ್ಮ ನೈಜ ಸ್ವರೂಪ (ಜ್ಞಾನ, ಆನಂದ, ಅಮಲ, ಶೇಷತ್ವ) ಮರೆಯಾಗುತ್ತದೆ. ಇದರಿಂದಲೇ ಬದ್ಧರನ್ನು 'ತಿರೋಹಿತ ಸ್ವಸ್ವರೂಪರು' ಎಂದು ನಿರ್ದೇಶಿಸುತ್ತಾರೆ.

ಬದ್ಧಜೀವರಿಗೆ ಮೂರು ಪ್ರವೃತ್ತಿಗಳು ಸಹಜವಾದುವು. ಪುಣ್ಯ, ಪಾಪ ಮತ್ತು ಅನುಭಯ. ಅನುಭಯವೆಂದರೆ ಪಾಪವೂ ಪುಣ್ಯವೂ ಅಲ್ಲದುದು; ನಿತ್ಯಕರ್ಮಾನುಷ್ಠಾನ, ನಿಷಿದ್ಧವಲ್ಲದ ಇಂದ್ರಿಯವ್ಯಾಪಾರ ಮುಂತಾದ ಶಾಸ್ತ್ರವಿಹಿತ ಮತ್ತು ನೈಸರ್ಗಿಕ ಪ್ರವೃತ್ತಿಗಳು ಈ ಜಾತಿಗೆ ಸೇರಿದುವು. ಪಾಪದಂತೆ ಪುಣ್ಯವೂ ಮೋಕ್ಷಪ್ರತಿಬಂಧಕ ಎನ್ನುವುದನ್ನು ಮರೆಯಬಾರದು. ಮುಕ್ತಿಯನ್ನು ಬಯಸುವವನು ಪಾಪ, ಪುಣ್ಯಗಳೆರಡನ್ನೂ ದಾಟಬೇಕು. ಅದಕ್ಕಾಗಿಯೇ ಶ್ರುತಿಯು ''ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಂ ಉಪೈತಿ'' ಎಂದು ಹೇಳುತ್ತದೆ. ಈ ಕಾರಣದಿಂದಲೇ ದಾನಾದಿ ಪುಣ್ಯಕರ್ಮಗಳನ್ನು ಮಾಡುವವರೂ ಕೂಡ ಪುಣ್ಯದ ಕರ್ಮ ಫಲಾನುಭವ ವನ್ನು ತಪ್ಪಿಸಿಕೊಳ್ಳಲು 'ನ ಮಮ' (ನನಗೆ ಅಲ್ಲ) ಎಂದು ಸಂಕಲ್ಪತ್ಯಾಗ ಮಾಡುತ್ತಾರೆ.

ಮುಕ್ತರೂ ನಿತ್ಯರೂ ಲೀಲಾವಿಭೂತಿಯರಲ್ಲಿ ಇಲ್ಲದವರು; ಅವರಿರುವುದು ನಿತ್ಯವಿಭೂತಿ ಎನಿಸಿಕೊಳ್ಳುತ್ತದೆ. ಇದನ್ನು ಅಪ್ರಾಕೃತದ್ರವ್ಯವೆಂದೂ, ತೇಜೋಮಯವೆಂದೂ, ಕಾಲಾತೀತವೆಂದೂ, ತ್ರಿಗುಣರಹಿತವೆಂದೂ ಬಣ್ಣಿಸುತ್ತಾರೆ. ಮುಕ್ತರಿಗೂ ನಿತ್ಯರಿಗೂ ಈಶ್ವರನಿಗೂ ಇದು ಭೋಗಭೂಮಿ; ಇಲ್ಲಿ ಈಶ್ವರನೇ ಪರಮ ಭೋಗ್ಯವಸ್ತು. ಇದನ್ನೇ ವೈಕುಂಠವೆಂದೂ ಪರಮಪದವೆಂದೂ ವ್ಯವಹರಿಸುತ್ತಾರೆ.

ಮುಕ್ತರು ತಮಗೆ ಪ್ರತಿಬಂಧಕವಾಗಿದ್ದ ಪ್ರಕೃತಿ ಸಂಬಂಧವನ್ನು ಉಪಾಯಗಳಿಂದ ಕಳಚಿ ತಮ್ಮ ನೈಜಸ್ವರೂಪವನ್ನು ಅನುಭವಿಸಲಾರಂಭಿಸುತ್ತಾರೆ. ಲೀಲಾವಿಭೂತಿಯಲ್ಲಿ ಸಂಕುಚಿತವಾಗಿದ್ದ ಜ್ಞಾನವು ಇಲ್ಲಿ ವಿಕಸಿತವಾಗುತ್ತದೆ. ಇಲ್ಲಿ ಮುಕ್ತರ ಸ್ವಭಾವವನ್ನು 'ಆವಿರ್ಭೂತ ಸ್ವಸ್ವರೂಪ'ವೆಂದು ನಿರ್ದೇಶಿಸುತ್ತಾರೆ. ಇವರ ಅನುಭವವನ್ನು 'ಸಂಕೋಚರಹಿತ ಭಗವದನುಭವ'ವೆಂದೂ 'ಪರಿಪೂರ್ಣ ಬ್ರಹ್ಮಾನು ಭವ'ವೆಂದೂ ಬಣ್ಣಿಸುತ್ತಾರೆ. ಈ ಸ್ವರೂಪಾವಿರ್ಭಾವಕ್ಕೆ ಪೂರ್ವಾವಧಿಯುಂಟು, ಉತ್ತರಾವಧಿಯಿಲ್ಲ. ಎಂದರೆ ಸ್ವರೂಪಜ್ಞಾನವು ಆವಿರ್ಭಾವ ತಳೆದ ಗಳಿಗೆಯಿದೆ; ಅದಕ್ಕೆ ಮುಂಚೆ ಅವರು ಬದ್ಧರಾಗಿದ್ದರು, ಲೀಲಾವಿಭೂತಿಯಲ್ಲಿದ್ದರು. ಆದರೆ ನಿತ್ಯವಿಭೂತಿಗೆ ಬಂದನಂತರ ಅದು ಮುಗಿಯುವ ಗಳಿಗೆಯಿಲ್ಲ. ಲೀಲಾವಿಭೂತಿಗೆ ಅವಸಾನವುಂಟು, ನಿತ್ಯವಿಭೂತಿಗೆ ಇರದು. ಜಗತ್ಕಾರಣತ್ವ, ಲಕ್ಷ್ಮೀಪತಿತ್ವ ಎರಡು ವಿನಾ ಉಳಿದ ವಿಚಾರಗಳಲ್ಲಿ ಮುಕ್ತಿಯೆಂದರೆ ಬ್ರಹ್ಮಸಾಮ್ಯಾವಸ್ಥೆಯೆಂದು ನಿರ್ದೇಶಿಸುತ್ತಾರೆ.

ಮುಕ್ತರು ಸಂಸಾರದಿಂದ ಮುಕ್ತಿಗೆ, ವೈಕುಂಠಕ್ಕೆ ಬಂದವರಾದರೆ ನಿತ್ಯರು ಎಂದೂ ಸಂಸಾರದಲ್ಲಿದ್ದವರೇ ಅಲ್ಲ; ಅವರು 'ಅಸ್ಪೃಷ್ಟಸಂಸಾರ'ರು, ಸಂಸಾರವನ್ನು ಮುಟ್ಟದವರು. ಈಶ್ವರನ ಸಂಕಲ್ಪದಿಂದ ಅನಾದಿಯಾಗಿ ನಿತ್ಯವಿಭೂತಿಯಲ್ಲಿಯೇ ಇರುವವರು. ಅವರಿಗೆ ಯಾವ ವಿಧವಾದ

ಕರ್ಮಸಂಬಂಧವೂ ಇರದು; ನಿತ್ಯ ಕರ್ಮಾನುಷ್ಠಾನದ ಅಗತ್ಯವೂ ಅವರಿಗಿರದು. ಸರ್ವದಾ ಅವರ ಜ್ಞಾನ ವಿಕಸಿಕವೇ. ಅವರ ಸ್ವಸ್ವರೂಪಕ್ಕೆ ತಿರೋಧಾನವಾಗಲೀ ಪೂರ್ವಾವಧಿಯುಳ್ಳ ಆವಿರ್ಭಾವವಾಗಲೀ ಇಲ್ಲ; ಅವರದ್ದು 'ಅನಾದ್ಯಾವಿರ್ಭೂತಸ್ವಸ್ವರೂಪ'. ನಿತ್ಯವಿಭೂತಿಯೆನಿಸಿಕೊಳ್ಳುವ ಭೋಗಭೂಮಿಯಲ್ಲಿ, ಎಂದರೆ ವೈಕುಂಠದಲ್ಲಿ, ಅವರು ಲೋಕದಂಪತಿಗಳಿಗೆ (ಶ್ರೀನಿವಾಸನಿಗೆ) ನಿತ್ಯಕೈಂಕರ್ಯ ಮಾಡುತ್ತ ಇರುತ್ತಾರೆ. ಈ ಕೈಂಕರ್ಯವೂ ಈಶ್ವರನ ನಿಯಮದಿಂದಲೇ ವ್ಯವಸ್ಥಿತವಾದುದು. ನಿತ್ಯರಾದ ಶೇಷ (ಶಯನಕ್ಕೆ), ಗರುಡ (ವಾಹನವಾಗಿ), ವಿಷ್ವಕ್ಸೇನ (ಸೇನಾಧಿಪತ್ಯಕ್ಕಾಗಿ) ಶಂಖ-ಆಳ್ವಾರ್ ಮತ್ತು ಚಕ್ರತ್ತಾಳ್ವಾರ್ (ವಿರೋಧಿ ನಿರಸನಕ್ಕಾಗಿ) ಇವರು ನಿದರ್ಶನಗಳು. ನಿತ್ಯರು ಅಸ್ಪೃಷ್ಟಸಂಸಾರರಾದರೂ ಸ್ವತಂತ್ರರಲ್ಲ; ಈಶ್ವರನ ಸಂಕಲ್ಪದಿಂದಲೇ ಅವರು ಪರತಂತ್ರರು. ಲಕ್ಷ್ಮಿಯೂ ಪರತಂತ್ರಳೇ, ಆದರೂ, ಅವಳ ಪಾರತಂತ್ರ್ಯ ತನ್ನ ಸಂಕಲ್ಪದಿಂದಲೇ ಸಿದ್ಧವಾದುದು. ಈ ಕಾರಣದಿಂದ ವಡಗಲೆ ಸಂಪ್ರದಾಯದವರು ಲಕ್ಷ್ಮಿಯನ್ನು ಜೀವಕೋಟಿಯಲ್ಲಿ ಸೇರಿಸದೆ ಈಶ್ವರಕೋಟಿಯಲ್ಲಿ ಸೇರಿಸುತ್ತಾರೆ. ಪರತಂತ್ರಳೆಂಬ ಕಾರಣದಿಂದ ತೆಂಗಲೆಯವರು ಅವಳನ್ನು ಜೀವ ಕೋಟಿಯಲ್ಲಿಯೇ ಸೇರಿಸುತ್ತಾರೆ. ಭಗವಂತನ ಆಯುಧ - ಆಭರಣ ವಿಶೇಷಗಳಿಂದ ಉದ್ಭೂತರಾದ ಆಳ್ವಾರುಗಳನ್ನು, ದಿವ್ಯಸೂರಿಗಳೆಂದು ವ್ಯವಹರಿಸುತ್ತಾರೆ; ಇವರೂ ನಿತ್ಯ ಕೋಟಿಗೆ ಸೇರಿದವರು. ತಿರುಮಳಿ ಶೈ ಆಳ್ವಾರರು ಸುದರ್ಶನ ಚಕ್ರದಿಂದ ತೊಂಡರಡಿಪ್ಪೊಡಿಯಾಳ್ವಾರರು ವೈಜಯಂತಿ ವನಮಾಲೆಯಿಂದ, ಪೊಯ್ಗೈಯ್ ಆಳ್ವಾರರು ಪಾಂಚಜನ್ಯ ಶಂಖದಿಂದ, ಪೂದತ್ತಾಳ್ವಾರರು ಕೌಮೋದಕೀ ಗದೆಯಿಂದ, ಕುಲಶೇಖರರು ಕೌಸ್ತುಭದಿಂದ, ಹೀಗೆಯೇ ಇತರ ಆಳ್ವಾರರೂ ವಿಷ್ಣುವಿನ ಸಾನ್ನಿಧ್ಯದಿಂದಲೇ ಅವತರಿಸಿದರೆಂದು ಕಲ್ಪನೆ.

ಉಪಾಯಗಳು

ಹೀಗೆ ತ್ರಿವಿಧಚೇತನರೂ ಪ್ರಕೃತಿಯೂ ಈಶ್ವರನೂ ತತ್ತ್ವತ್ರಯವೆನಿಸಿ ಕೊಳ್ಳುತ್ತಾರೆ. ಶ್ವೇತಾಶ್ವತರ ಉಪನಿಷತ್ತಿನಲ್ಲಿ "ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ" ಎಂಬ ಮಾತು ಬರುತ್ತದೆ. ಇಲ್ಲಿ ಭೋಕ್ತೃವೆಂದರೆ ಚೇತನ (ಜೀವ), ಭೋಗ್ಯವೆಂದರೆ ಪ್ರಕೃತಿ, ಪ್ರೇರಿತಾರನೆಂದರೆ ಈಶ್ವರ. ಜೀವರು ಪರಮಾತ್ಮನಿಗೆ ದಾಸರು ಎನ್ನುವುದೇ ತತ್ತ್ವತ್ರಯದ ಮುಖ್ಯ ವಿಚಾರ. 'ದಾಸಭೂತಾಃ ಸ್ವತಃ ಸರ್ವೇಹಿ ಆತ್ಮನಃ ಪರಮಾತ್ಮನಃ, 'ಆತ್ಮಾ ಶೇಷೋ ಹಿ ಪರಮಾತ್ಮನಃ' ಎಂಬುದೇ ಈ ವಿವೇಚನೆಯ ತಾತ್ಪರ್ಯ.

ಇದನ್ನು ಮರೆಯುವುದರಿಂದ ದೇಹಾತ್ಮಭ್ರಾಂತಿ, ಸ್ವತಂತ್ರಾತ್ಮಭ್ರಾಂತಿ, ಜೀವಪರಮಾತ್ಮೈಕ್ಯಭ್ರಾಂತಿ ಎಂಬ ಪ್ರತಿಬಂಧಕ ಕಲ್ಪನೆಗಳು ಒದಗುತ್ತವೆ. ದೇಹವೇ (ಪ್ರಕೃತಿಯೇ, ಅಚಿತ್ತೇ) ಆತ್ಮ (ಜೀವ, ಚಿತ್) ಎಂದು ಬಗೆದು ದೈಹಿಕ ಪ್ರವೃತ್ತಿಗಳನ್ನು ಆತ್ಮನ ವ್ಯಾಪಾರಗಳೆಂದು ಗ್ರಹಿಸುವುದು ದೇಹಾತ್ಮಭ್ರಾಂತಿ. ಆತ್ಮವೇ ಸ್ವತಂತ್ರವೆಂದು, ಸ್ವಾಮಿಯೆಂದು, ಆಧಾರ-ಅನಪೇಕ್ಷಿಯೆಂದು ಬಗೆಯುವುದು ಸ್ವತಂತ್ರಾತ್ಮ-ಭ್ರಾಂತಿ; ಇಲ್ಲಿ ತಾನು ಈಶ್ವರನಿಗೆ ಶೇಷವೆಂಬ ನೈಜಾನುಭವ ಮರೆಯಾಗಿರುತ್ತದೆ. ಜೀವವೂ ಈಶ್ವರನೂ ಒಂದೇ ಎಂದು ಬಗೆಯುವುದು ಜೀವಪರಮಾತ್ಮ-ಐಕ್ಯ-ಭ್ರಾಂತಿ, ಇಲ್ಲಿ ನವವಿಧ ಸಂಬಂಧದ ಜ್ಞಾನವಿರುವುದಿಲ್ಲ. ಮುಕ್ತಿಗೆ ಮುಂಚೆ ಈ ಮೂರು ಭ್ರಾಂತಿಗಳನ್ನೂ ನಿರಸನ ಮಾಡಿಕೊಳ್ಳಬೇಕು. ಇದಕ್ಕಾಗಿ ಉಪಾಯಗಳನ್ನು ಹೇಳಿದ್ದಾರೆ.

ಕರ್ಮಮಾರ್ಗ, ಜ್ಞಾನಮಾರ್ಗ, ಭಕ್ತಿಯೋಗ, ಪ್ರಪತ್ತಿ ಈ ನಾಲ್ಕು ಉಪಾಯಗಳು. ಬ್ರಹ್ಮಸಮರ್ಪಣಬುದ್ಧಿಯಿಂದ, ನಿಷ್ಕಾಮವಾಗಿ, ಶಾಸ್ತ್ರವಿಹಿತವಾದ ಕರ್ಮಗಳನ್ನು ಮಾಡುವುದು ಕರ್ಮಮಾರ್ಗ. ಇದರಲ್ಲಿ

ನಿತ್ಯಕರ್ಮಾನುಷ್ಠಾನ, ದಾನ, ಯಜ್ಞ, ವ್ರತ, ತೀರ್ಥಯಾತ್ರೆ, ತಪಸ್ಸು ಎಲ್ಲವೂ ಸೇರುತ್ತವೆ. ಜೀವದ ಸ್ವರೂಪವನ್ನೂ ಈಶ್ವರನ ಸ್ವರೂಪವನ್ನೂ ವಿವೇಕದಿಂದ ತಿಳಿಯುವುದು ಜ್ಞಾನ. ಜೀವವು ಪ್ರಕೃತಿಯಿಂದಲೂ ಈಶ್ವರನಿಂದಲೂ ಬೇರೆಯಾದುದು ಎಂದು ಮನವರಿಕೆ ಮಾಡಿಕೊಳ್ಳುವುದೇ ತಿಳುವಳಿಕೆ ಯೆನಿಸಿಕೊಳ್ಳುತ್ತದೆ. ಜ್ಞಾನವು ಹೆಚ್ಚಿದರೆ ಭಕ್ತಿಯಾಗಿ ಪರಿಣಮಿಸುತ್ತದೆ. ಭಕ್ತಿಯನ್ನು 'ಕೇವಲ ಪ್ರೀತಿ ರೂಪವಾದ ಜ್ಞಾನ' ಎಂದು ನಿರ್ದೇಶಿಸುತ್ತಾರೆ; 'ಪ್ರೀತಿಪೂರ್ವಮನುಧ್ಯಾನಂ ಭಕ್ತಿರಿತ್ಯಭಿಧೀಯತೇ'' ಎಂಬ ನಿರ್ವಚನವಿದೆ. ವೇದಾಂತದೇಶಿಕರು 'ತೈಲಧಾರೆಯ್ಯೆಪ್ಪೋಲೆ ನಿರಂತರಮಾನ ಸ್ಮೃತಿರೂಪ ಮಾಯ್' ಎಂದು ಮುಂತಾಗಿ ವಿವರಿಸಿದ್ದಾರೆ. ಎಣ್ಣೆಯ ಧಾರೆಯಂತೆ ಎಡೆಬಿಡದೆ (ಅವಿಚ್ಛಿನ್ನವಾಗಿ) ಇರುವುದು ಭಕ್ತಿಯ ಲಕ್ಷಣ. ಯಮನಿಯ ಮಾದಿ ಅಷ್ಟಾಂಗಯೋಗದಿಂದ ಭಕ್ತಿಯು ಬಲಿಯುತ್ತದೆ. ಭಗವಂತನಿಗೂ ಭಕ್ತನಿಗೂ ಇರುವ ಸಂಬಂಧದಲ್ಲಿ ಈಶ್ವರನೇ ಎಲ್ಲಕ್ಕೂ ಆಧಾರ (ಅನನ್ಯ ನಿಷ್ಠ), ಅವನೇ ಎಲ್ಲರಿಗೂ ಗತಿ (ಅನನ್ಯಾಧೀನ) ಮತ್ತು ಎಲ್ಲ ಭೂತಗಳೂ ಅವನ ಶೇಷವೇ (ಅನನ್ಯಶೇಷ).

ಪ್ರಪತ್ತಿ

ಕರ್ಮ, ಜ್ಞಾನ, ಭಕ್ತಿಗಳು ಮೇಲಿನ ಮೂರು ವರ್ಣದ ಜನರಿಗೆ ಮಾತ್ರ ವಿಹಿತವೆಂದು ನಂಬಿಕೆಯಿದೆ. ಇವುಗಳ ಅನುಷ್ಠಾನಕ್ಕೆ ಸಂಸ್ಕೃತಿಯ ಸಹಕಾರ, ಶಾಸ್ತ್ರಗ್ರಂಥಗಳ ನೆರವು, ಕುಲ-ಶೀಲಗಳ ಹಿನ್ನೆಲೆ ಅಗತ್ಯವೆಂದು ಈ ನಂಬಿಕೆಯ ವಿವರ. ಆದರೆ ವಿಶಿಷ್ಟಾದ್ವೈತದಲ್ಲಿ ಈ ಮೂರನ್ನೂ ಮೀರಿ 'ಸರ್ವಾಧಿಕಾರವುಳ್ಳ', ಎಂದರೆ ಎಲ್ಲರೂ ಅನುಸರಿಸಬಹುದಾದ, ಪ್ರಪತ್ತಿ ಮುಖ್ಯವಾದ ಉಪಾಯವೆಂದು ಹೇಳುತ್ತಾರೆ. ಪ್ರಪತ್ತಿ ಅಥವಾ ಪ್ರಪದನ ಎಂಬುದು ಭಕ್ತಿಗಿಂತಲೂ ಹೆಚ್ಚಿನದು. ಇದನ್ನೇ ಶರಣಾಗತಿಯೆಂದು ವ್ಯವಹರಿಸುತ್ತಾರೆ. ಇದರ ವಿವರಣೆ ಮುಂದೆ ಬರುತ್ತದೆ.

ಭಕ್ತಿಗೂ ಪ್ರಪತ್ತಿಗೂ ತಾತ್ತ್ವಿಕವಾದ ಭೇದಗಳುಂಟು. ನಾವು ಮಾಡಿದ ಕರ್ಮಗಳಿಗೆ ಸಂಚಿತ, ಆಗಾಮೀ, ಪ್ರಾರಬ್ಧಗಳೆಂಬ ಫಲಗಳುಂಟಷ್ಟೆ. ಇವುಗಳಲ್ಲಿ ಸಂಚಿತ, ಆಗಾಮೀ ಕರ್ಮಗಳನ್ನು ಭಕ್ತಿ ಹೊಡೆದುಹಾಕುತ್ತದೆ. ಆದರೆ ಪ್ರಾರಬ್ಧದಲ್ಲಿ ಅಭ್ಯುಪಗತ ಫಲ (ಇದೇ ದೇಹದಲ್ಲಿ ಅನುಭವಿಸಬೇಕಾದುದು) ಮತ್ತು ಅನಭ್ಯುಪಗತ ಫಲ (ಮುಂದಿನದೇಹದಲ್ಲಿ ಅನುಭವಿಸತಕ್ಕುದು) ಎಂದು ಎರಡು ಬಗೆಗಳು. ಅನಭ್ಯುಪಗತಫಲವು ಅನಿವಾರ್ಯವಾದುದು; ಭಕ್ತಿಯು ಅದನ್ನು ಪರಿಹರಿಸಲಾರದು. ಆದರೆ ಪ್ರಪತ್ತಿಯು 'ಸರ್ವಾನಿಷ್ಟನಿವರ್ತನ ಕ್ಷಮ', ಎಂದರೆ ಪ್ರಾರಬ್ಧವನ್ನೂ ಪರಿಹರಿಸಬಲ್ಲುದು. ಬುದ್ಧಿಪೂರ್ವಕವಾಗಿ ಮಾಡಿದ ಉತ್ತರಾಘಗಳನ್ನು ಅನುಭವಿಸಲೇಬೇಕೆಂಬ ನಿಯಮ ಪ್ರಪನ್ನನಿಗೆ ಇರದು. ಭಕ್ತನಿಗೆ ಮುಕ್ತಿ ದೊರೆಯುವುದು ಅನಭ್ಯುಪಗತಫಲಗಳನ್ನೂ ಅನುಭವಿಸಿದ ನಂತರವೇ; ಇದು ಜನ್ಮಾಂತರಗಳವರೆಗೂ ಮುಕ್ತಿಯನ್ನು ತಡೆಯಬಹುದು. ಇದಕ್ಕಾಗಿಯೇ ಭಕ್ತನ ಮುಕ್ತಿಯನ್ನು 'ವಿಳಂಬಕ್ಷಮ' ಎನ್ನುತ್ತಾರೆ. ಆದರೆ ಪ್ರಪನ್ನನ ಮುಕ್ತಿ ಒಡನೆಯೇ ಸಿದ್ಧವಾಗುತ್ತದೆ; ದೇಹಾವಸಾನವಾದನಂತರ ಅವನು ನಿತ್ಯವಿಭೂತಿಯಲ್ಲಿ ಸೇರಿಬಿಡುತ್ತಾನೆ. ಈ ಕಾರಣದಿಂದ ಪ್ರಪತ್ತಿಯನ್ನು 'ಆಶುಕಾರಿ' ಎಂದು ವ್ಯವಹರಿಸುತ್ತಾರೆ.

ಭಕ್ತಿಯನ್ನು ಅನುಷ್ಠಾನ ಮಾಡುವುದು ಕಷ್ಟ; ಭಕ್ತಿಯು ದುಷ್ಕರ. ಅದಕ್ಕೆ ವೀರ್ಯ ಬೇಕು, ಅನವರತ ಪ್ರಯತ್ನಬೇಕು. ಇದು 'ಅಸಕೃತ್ ಕರ್ತವ್ಯ' (ಪ್ರತಿದಿನವೂ ನಡೆಸಬೇಕಾದುದು). ಎಂದರೆ, ಶಕ್ತರಿಗೆ ಮಾತ್ರ ಇದು ಸಾಧ್ಯ. ಆದರೆ ಪ್ರಪತ್ತಿಯ ದಾರಿ ಸುಲಭ, ಸುಕರ. ಅಶಕ್ತರಾದರೂ ನಿರಾತಂಕವಾಗಿ ಇದನ್ನು ಮಾಡಬಹುದು; ಅಷ್ಟಲ್ಲದೆ ಇದು 'ಸಕೃತ್‌ಕರ್ತವ್ಯ', ಒಮ್ಮೆ ಮಾಡಿದರೆ ಸಾಕು. ಭಕ್ತಿಯನ್ನು ಮಾಡಲಾರದವರಿಗೂ, ಅಶಕ್ತರಿಗೂ ಪ್ರಪತ್ತಿಯೇ ದಾರಿ (ಭಕ್ತಿಯೋಗಾನರ್ಹಾಣಾಂ ಅಶಕ್ತಾನಾಂ ಚ ಪ್ರಪತ್ತಿಃ ಏವ ಉಪಾಯಃ). ಭಕ್ತಿಯನ್ನು ಮಾಡುವಾಗ ಅಡ್ಡಿಗಳು ಒದಗಬಹುದು; ಆದರೆ ಪ್ರಪತ್ತಿಯು 'ಪ್ರತಿಬಂಧಾನರ್ಹ', ಅಡ್ಡಿಯನ್ನು ಒಡ್ಡಲಾರದುದು.

ಭರನ್ಯಾಸ

ಪ್ರಪತ್ತಿ, ಪ್ರಪದನ, ಭರನ್ಯಾಸ, ಶರಣಾಗತಿ, ಆತ್ಮನಿಕ್ಷೇಪ, ಆತ್ಮ ಸಮರ್ಪಣ ಇವೆಲ್ಲ ಸುಮಾರಾಗಿ ಒಂದೇ ಅರ್ಥವನ್ನು ಹೇಳುವ ಮಾತುಗಳು. ಒಂದೊಂದು ಮಾತಿಗೂ ವಿಶೇಷವಾದ ಅರ್ಥವೇನೋ ಉಂಟು; ಆದರೆ ಎಲ್ಲ ಮಾತುಗಳ ತಾತ್ಪರ್ಯ ಒಂದೇ. ಯಾವುದೂ ತನ್ನದಲ್ಲ, ಎಲ್ಲವೂ ಈಶ್ವರನಿಗೇ ಸೇರಿದ್ದು; ತನ್ನನ್ನು ಸಲಹುವ ಹೊಣೆ ಕೂಡ ತನ್ನದಲ್ಲ, ಈಶ್ವರನದು ಎನ್ನುವ ಕಲ್ಪನೆಯೇ ತಾತ್ಪರ್ಯ. ತನ್ನ ಮತ್ತು ತನ್ನವರ ಹೊರೆಯನ್ನೆಲ್ಲ (ಭಾರವನ್ನೆಲ್ಲ) ಈಶ್ವರನಲ್ಲಿ ಇಡುವುದು (ನ್ಯಾಸ) ಆತ್ಮನಿಕ್ಷೇಪವೆನಿಸಿಕೊಳ್ಳುತ್ತದೆ. (ಆತ್ಮ-ಆತ್ಮೀಯ- ಭರನ್ಯಾಸಃ ಹಿ ಆತ್ಮನಿಕ್ಷೇಪ ಉಚ್ಯತೇ). ಬೇರೆಯವರ ಮಾತಿರಲಿ, ತನ್ನ ರಕ್ಷಣೆಯ ವಿಷಯದಲ್ಲಿ ಕೂಡ ನಿರುತ್ಸುಕನಾಗಿರುವುದು ಇಲ್ಲಿನ ವಿಶೇಷ; ಲೋಕರಕ್ಷಕನಾದ ಈಶ್ವರನೇ ಈ ಸ್ವರೂಪ-ರಕ್ಷಾ-ಫಲ-ಭರಗಳನ್ನು ಹೊತ್ತಿದ್ದಾನೆ ಎಂಬ ಭಾವನೆ ಇದಕ್ಕೆ ಅಡಿಪಾಯ (ಸ್ವನಿರ್ಭರತ್ವ ಪರ್ಯಂತ ರಕ್ಷಕೈಕಾರ್ಥ್ಯ ಭಾವನಮ್).

ರಕ್ಷಣೆ ಮತ್ತು ಫಲಗಳ ಮೇಲೆ ತನ್ನದಾಗಿ ಯಾವ ಬಗೆಯ ಒಡೆತನವೂ ಇಲ್ಲ ಎಂದು ಅವುಗಳ ಬಗ್ಗೆ ಗೀಳನ್ನು ಬಿಡುವುದು ಮುಖ್ಯವಿಚಾರ (ತ್ಯಕ್ತರಕ್ಷಾ ಫಲಸ್ವಾಮ್ಯಂ ರಕ್ಷಸ್ಯ ಆತ್ಮಸಮರ್ಪಣಮ್). ಆತ್ಮಸ್ವರೂಪಭರ, ರಕ್ಷಣಭರ ಮತ್ತು ಫಲಭರ ಎಂಬ ಭರಭೇದಗಳನ್ನು ಹೇಳುತ್ತಾರೆ. ಈ ಭರನ್ಯಾಸಕ್ಕೆ ಮೂಲಭೂತವಾಗಿ ಜೀವನಾದ ತಾನು ಶೇಷ, ಈಶ್ವರನು ಶೇಷಿ ಎನ್ನುವ ಅನುಸಂಧಾನವಿರಬೇಕು. (ಶೇಷತ್ವಾನುಸಂಧಾನವಿಶಿಷ್ಟ-ಸ್ವರಕ್ಷಾಭರ ಸಮರ್ಪಣಮ್).

ಪ್ರಪತ್ತಿ ಅಥವಾ ಭರನ್ಯಾಸದಲ್ಲಿ ಐದು ಅಂಗಗಳನ್ನು ಹೇಳುತ್ತಾರೆ. ಇದು ಸಾಂಗಪ್ರಪದನ ಅಥವಾ ಪಂಚಾಂಗ ಯುಕ್ತ ಪ್ರಪತ್ತಿ ಎನಿಸಿಕೊಳ್ಳುತ್ತದೆ. ಐದು

ಅಂಗಗಳು ಯಾವುವೆಂದರೆ ಆನುಕೂಲ್ಯ ಸಂಕಲ್ಪ, ಪ್ರಾತಿಕೂಲ್ಯ ವರ್ಜನ, ಅಕಿಂಚನ ಭಾವ (ಕಾರ್ಪಣ್ಯ), ಮಹಾವಿಶ್ವಾಸ, ಗೋಪ್ತೃತ್ವವರಣ. ಸ್ಥಾವರ ಜಂಗಮ ಪದಾರ್ಥಗಳೆಲ್ಲವೂ ಈಶ್ವರನ ಶೇಷ, ಶರೀರ ಎಂದು ಬಗೆದು ಅವುಗಳಿಗೆ ಅನುಕೂಲವಾಗುವಂತೆ ವರ್ತಿಸುವುದು ಆನುಕೂಲ್ಯ ಸಂಕಲ್ಪ. ಈಶ್ವರನ ಇಚ್ಛೆಗೆ ವಿರುದ್ಧವಾದ, ಪ್ರತಿಕೂಲವೆನಿಸಿದ ವೃತ್ತಿಗಳನ್ನು ಬಿಡುವುದು ಪ್ರಾತಿಕೂಲ್ಯವರ್ಜನ. ಯಾವ ಸಿದ್ಧಿಗೂ ತಾನು ಸಮರ್ಥನಲ್ಲ, ಯಾವ ಸಾಧನವನ್ನೂ ತಾನು ನಡೆಸಲು ಶಕ್ತನಲ್ಲ ಎಂಬುದನ್ನು ಅರಿತು ಅದನ್ನು ಅನುಸಂಧಾನದಲ್ಲಿ ತರುವುದು ಅಕಿಂಚನ ಭಾವ ಅಥವಾ ಕಾರ್ಪಣ್ಯ. ಈಶ್ವರನು ತನ್ನನ್ನು ನಿಃಸಂಶಯವಾಗಿ ಸಲಹುತ್ತಾನೆ ಎಂಬ ಭರವಸೆ ಮಹಾವಿಶ್ವಾಸವೆನಿಸಿಕೊಳ್ಳುತ್ತದೆ. ಈಶ್ವರನು ತನ್ನ ರಕ್ಷಕನಾಗಬೇಕೆಂಬ ಬಲವಾದ ಬಯಕೆ ಗೋಪ್ತೃತ್ವವರಣ. ಇವು ಐದೂ ಪ್ರಪತ್ತಿಯ ಅವಶ್ಯ ಮುಖಗಳು, ಹಂತಗಳು, ಅಂಗಗಳು. ಇವುಗಳಿಲ್ಲದೆ ಭರನ್ಯಾಸವಾಗ ಲಾರದು; ಶರಣಾಗತಿ ಸಫಲವಾಗದು.

ಪ್ರಪತ್ತಿಯನ್ನು ಪೂರೈಸಲು ಮುಮುಕ್ಷುಗಳಿಗೆ ಆಚಾರ್ಯರು ರಹಸ್ಯತ್ರಯಗಳನ್ನು ನಿರ್ದೇಶಿಸಿದ್ದಾರೆ: ಮೂಲ ಮಂತ್ರ (ತಿರುಮಂತ್ರ), ದ್ವಯ ಮತ್ತು ಚರಮಶ್ಲೋಕ. '**ಓಂ ನಮೋ ನಾರಾಯಣಾಯ**' ಎನ್ನುವ ಅಷ್ಟಾಕ್ಷರೀ ಮಂತ್ರವು ಮೂಲಮಂತ್ರ, ಇದು ನಾರಾಯಣೋಪನಿಷತ್ತಿನಲ್ಲಿ ಬರುತ್ತದೆ. 'ಓಮಿತ್ಯೇಕಾಕ್ಷರಂ ಬ್ರಹ್ಮ; ನಮ ಇತಿ ದ್ವೇ; ನಾರಾಯಣೇತಿ ಪಂಚಾಕ್ಷರಾಣಿ ಏತದ್ವೈ ನಾರಾಯಣಾಷ್ಟಾಕ್ಷರಪದಂ'' ಎಲ್ಲವೂ ಈ ಅಷ್ಟಾಕ್ಷರದಲ್ಲಿ ಅಡಗಿದೆ ಎಂದು ಶ್ರದ್ಧೆ (ಸರ್ವಂ ಅಷ್ಟಾಕ್ಷರಾಂತಸ್ಥಮ್).

ರಾಮಾನುಜರು ಈ ಮಂತ್ರದ ಉಪದೇಶವನ್ನು ಪಡೆಯಲು ತಿರುಕ್ಕೊಟ್ಟಿಯೂರ್-ನಂಬಿಯ ಮನೆಬಾಗಿಲಿಗೆ ಹದಿನೆಂಟು ಬಾರಿ ಅಲೆದರಂತೆ. ರಹಸ್ಯವೆಂದು ನಂಬಿಯು ಇದನ್ನು ಅವರಿಗೆ ಉಪದೇಶ

ಮಾಡಿದಾಗ ರಾಮಾನುಜರು "ಇದನ್ನು ಯಾರಿಗಾದರೂ ಹೇಳಿದರೆ, ಹೇಳಿದವರಿಗೆ ಏನಾಗುತ್ತದೆ?" ಎಂದು ಕೇಳಿದರಂತೆ. ನಂಬಿಯು "ಒಡನೆಯೇ ಸಾಯುತ್ತಾರೆ" ಎನ್ನಲು ರಾಮಾನುಜರು "ಕೇಳಿದವರಿಗೆ ಏನಾಗುತ್ತದೆ?" ಎಂದು ಕೇಳಿದರಂತೆ. ನಂಬಿಯು "ಅವರಿಗೆ ಮುಕ್ತಿಯು ದೊರೆಯುತ್ತದೆ" ಎನ್ನಲು ಒಡನೆಯೇ ರಾಮಾನುಜರು ಊರಿನ ಗುಡಿಯ ಗೋಪುರವನ್ನೇರಿ ಗಟ್ಟಿಯಾಗಿ ಈ ಮಂತ್ರವನ್ನು ಕೂಗಿಕೊಂಡರಂತೆ. ಅಷ್ಟು ಅನುಕಂಪ ಅವರದ್ದು.

'ಶ್ರೀಮನ್ನಾರಾಯಣಚರಣೌ ಶರಣಂ ಪ್ರಪದ್ಯೇ' ಎನ್ನುವುದು ದ್ವಯಾನುಸಂಧಾನ. ಚರಮಶ್ಲೋಕವೆಂಬುದು ಭಗವದ್ಗೀತೆಯಲ್ಲಿ ಅದರ ಸಾರ ಸರ್ವಸ್ವದಂತೆ ಬರುವ

"ಸರ್ವಧರ್ಮಾನ್ ಪರಿತ್ಯಜ್ಯ ಮಾಂ ಏಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯಃ ಮೋಕ್ಷಯಿಷ್ಯಾಮಿ ಮಾ ಶುಚಃ॥"

ಎಂದು ಭಗವದಾಶ್ವಾಸನೆ. ಎಲ್ಲ ಧರ್ಮಗಳನ್ನೂ ಬಿಟ್ಟು ತನ್ನನ್ನೇ ಮೊರೆಹೊಕ್ಕರೆ ಅಂಥ ಜೀವಿಯನ್ನು ತಾನು ಎಲ್ಲ ಪಾಪಗಳಿಂದ ಬಿಡಿಸುತ್ತೇನೆ ಎಂದು ಕೃಷ್ಣ ಹೇಳಿದ ಮಾತು ಇದು.

ಈ ರಹಸ್ಯತ್ರಯಗಳ ಅನುಷ್ಠಾನದಿಂದ ಜೀವನಿಗೆ ತ್ರಿಗುಣಾತ್ಮಕವಾದ ಮಾಯೆ ಹರಿದು, ಆತ ತನ್ನ ಜ್ಞಾನಾನಂದಗಳಿಗೆ ಈಶ್ವರನ ಲೀಲೆಯಿಂದ ಒದಗಿದ ತಿರೋಧಾನವನ್ನು ತೆಗೆದು, ತಾನು ಈಶ್ವರನ ಶೇಷವೆಂದು ಜ್ಞಾನವನ್ನು ಪಡೆದು, ಲಬ್ಧಾತ್ಮಕನಾಗಿ ಅವಿದ್ಯಾನಿವೃತ್ತಿ ಪೂರ್ವಕವಾದ ಬ್ರಹ್ಮಾನುಭವವನ್ನು ಹೊಂದುತ್ತಾನೆ.

ಅರ್ಥಪಂಚಕ

ಮೇಲೆ ಹೇಳಿದ ಭಗವತ್ಪ್ರಾಪ್ತಿಗೆ, ಬ್ರಹ್ಮಾನುಭವಕ್ಕೆ ಸಾಧಕವಾಗಿ ಈ ಉಪಾಯಗಳ ಅನುಷ್ಠಾನಕ್ಕೆ ನೆರವಾಗುವ ಐದು 'ಅರ್ಥ'ಗಳನ್ನು ವಿಶಿಷ್ಟಾದ್ವೈತ ಸಿದ್ಧಾಂತವು ನಿರೂಪಿಸುತ್ತದೆ. ಇವುಗಳ ಪ್ರಯೋಜನ ಆತ್ಮಜ್ಞಾನ ಮತ್ತು ಈಶ್ವರ ಸಾಯುಜ್ಯ. **ಪ್ರಾಪ್ಯ** (ಪರಸ್ವರೂಪ), **ಪ್ರಾಪ್ತೃ** (ಸ್ವಸ್ವರೂಪ), **ಪ್ರಾಪ್ತ್ಯುಪಾಯ**, **ಫಲಪ್ರಾಪ್ತಿ** ಮತ್ತು **ಫಲಪ್ರಾಪ್ತಿ ವಿರೋಧ** (ವಿರೋಧಿ ಸ್ವರೂಪ) ಇವು ಅರ್ಥಪಂಚಕವೆಂದು ವ್ಯವಹಾರ. ಪ್ರಾಪ್ಯವೆಂದರೆ ನಾವು ಪಡೆಯಬೇಕಾಗಿರುವ, ಸೇರಬೇಕಾಗಿರುವ, ಬ್ರಹ್ಮನ ಸ್ವರೂಪ; ಇದೇ ಪರತತ್ತ್ವ; ಇದನ್ನೇ ಉಪೇಯವೆಂದೂ ಕರೆಯುತ್ತಾರೆ. ಪ್ರಾಪ್ತೃವೆಂದರೆ ಪಡೆಯುವವರು, ನಾವು, ಜೀವರು. ಅಸಾಧಾರಣಕರ್ಮದಿಂದ ನಮಗೆ ಒದಗುವ ವಿಶಿಷ್ಟವಾದ ಆಕಾರಕ್ಕೆ ಸ್ವಸ್ವರೂಪವೆನ್ನುವುದುಂಟು; ಜೀವದ ನೈಜಸ್ವರೂಪ ಅದು. ಜೀವರಲ್ಲಿ ನಿತ್ಯ, ತುಮುಲ, ಕೇವಲ, ಬದ್ಧ ಮುಮುಕ್ಷು ಮೊದಲಾದ ಭೇದವನ್ನು ಹೇಳುವ ಪರಿಪಾಠವಿದೆ.

ಪ್ರಾಪ್ಯಕ್ಕೂ (ಬ್ರಹ್ಮನಿಗೂ) ಪ್ರಾಪ್ತೃವಿಗೂ (ಜೀವನಿಗೂ) ನಡುವೆ ಇರುವ ವಿವರವೇ ಪ್ರಾಪ್ತಿ. ಈ ಪ್ರಾಪ್ತಿಗೆ ಕರ್ಮ, ಜ್ಞಾನ, ಭಕ್ತಿ ಮತ್ತು ಪ್ರಪತ್ತಿ ಎಂಬ ನಾಲ್ಕು ಉಪಾಯಗಳನ್ನು ಹೇಳಿದ್ದಾರೆ. ಇವುಗಳ ಪ್ರಸ್ತಾಪ ಈ ಮೊದಲೇ ಬಂದಿದೆ. ಉಪಾಯಗಳಲ್ಲಿ ಸಿದ್ಧ, ಸಾಧ್ಯ ಎಂದು ಎರಡು ಬಗೆಗಳನ್ನು ಹೇಳುವುದೂ ಉಂಟು. ಸಿದ್ಧೋಪಾಯವೆಂದರೆ ಭಗವಂತನೇ, ಭಕ್ತಿ ಮತ್ತು ಪ್ರಪತ್ತಿ ಇವು ಸಾಧ್ಯೋಪಾಯ ಎನಿಸಿಕೊಳ್ಳುತ್ತವೆ.

ಈ ಉಪಾಯಗಳ ಅನುಷ್ಠಾನದಿಂದ ಒದಗುವುದು ಫಲಪ್ರಾಪ್ತಿ. ಸಾಮಾನ್ಯವಾಗಿ ನಾವು ಹೇಳುವ ನಾಲ್ಕೂ ಪುರುಷಾರ್ಥಗಳು (ಧರ್ಮ, ಅರ್ಥ, ಕಾಮ, ಮೋಕ್ಷ) ಇದರಲ್ಲಿ ಸೇರುತ್ತವೆ. ಇವುಗಳಲ್ಲದೆ

ಐದನೆಯದಾದ ಭಗವತ್ಪ್ರಾಪ್ತಿಯನ್ನೂ ವಿಶಿಷ್ಟಾದ್ವೈತಸಿದ್ಧಾಂತವು ಫಲಗಳಲ್ಲಿ ಸೇರಿಸುತ್ತದೆ. ಮೋಕ್ಷವೆಂದರೆ ಈ ದರ್ಶನದ ಪರಿಭಾಷೆಯಲ್ಲಿ ಆತ್ಮಾನುಭವ, ಸ್ವಸ್ವರೂಪಪ್ರಾಪ್ತಿ; ಇದೇ ಕೈವಲ್ಯವೆನಿಸಿಕೊಳ್ಳುತ್ತದೆ. ಇಲ್ಲಿಗೆ ಆಧ್ಯಾತ್ಮಿಕವಿಕಾಸ ಮುಗಿಯಲಿಲ್ಲ; ಇದೇ ಆತ್ಯಂತಿಕವಾದ ಸ್ಥಿತಿಯಲ್ಲ. ಇದನ್ನೂ ಮೀರಿದ ಭಗವತ್ಪ್ರಾಪ್ತಿಯಲ್ಲಿ ಮಾತ್ರವೇ ಜೀವನಿಗೆ ಪರಿಪೂರ್ಣವಾದ ಆನಂದ ದೊರೆಯುವುದು. ಇಲ್ಲಿ ಜೀವನು ಪ್ರಕೃತಿಸಂಬಂಧವನ್ನು ನಿಃಶೇಷವಾಗಿ ತೊರೆದು, ನಿತ್ಯವಿಭೂತಿಯನ್ನು ಸೇರಿ, ಇತರ ನಿತ್ಯರೊಂದಿಗೂ ಮುಕ್ತರೊಂದಿಗೂ ನಿರತಿಶಯವಾದ ಆನಂದವನ್ನು ಅನುಭವಿಸುತ್ತ, ಈಶ್ವರನ ಪ್ರಾಪ್ತಿಯನ್ನು ಪಡೆಯುತ್ತಾನೆ. ಇದೇ ಪರಿಪೂರ್ಣಾನುಭವ, ಬ್ರಹ್ಮಾನುಭವ.

ಬದ್ಧನಾದ ಜೀವನು ಈ ಭಗವತ್ಪ್ರಾಪ್ತಿಯ ಸ್ಥಿತಿಯನ್ನು ಸೇರಲು ಉಪಾಯಗಳಿರುವಂತೆಯೇ ಅಡ್ಡಿ ಆತಂಕಗಳೂ ಇವೆ. ಇವು ವಿರೋಧಿ ಸ್ವರೂಪ ಎನಿಸಿಕೊಳ್ಳುವ ಐದನೆಯ 'ಅರ್ಥ'ದಲ್ಲಿ ಸೇರಿವೆ. ಇದನ್ನು ಫಲಪ್ರಾಪ್ತಿ ವಿರೋಧ ಎಂದೂ ವ್ಯವಹರಿಸುತ್ತಾರೆ. ಫಲಪ್ರಾಪ್ತಿಗೆ ಪ್ರತಿಕೂಲವರ್ತಿಗಳಾಗಿ ನಿಲ್ಲುವ ಕರ್ಮ, ಅವಿದ್ಯಾ, ವಾಸನಾ, ರುಚಿ, ಪ್ರಕೃತಿಸಂಬಂಧ ಇವೇ ವಿರೋಧಿವರ್ಗಗಳು.

ಮೇಲಿನ ನಾಲ್ಕೂ 'ಅರ್ಥ'ಗಳಿಗೆ ವಿರುದ್ಧವಾಗಿ ಪ್ರಾಪ್ಯ ವಿರೋಧಿ, ಪುರುಷಾರ್ಥವಿರೋಧಿ, ಪ್ರಾಪ್ತಿವಿರೋಧಿ ಎಂದೂ ಪರಿಗಣಿಸುವ ಪದ್ಧತಿಯಿದೆ. ಇದರಲ್ಲಿ ಮುಖ್ಯವಾದ ವಿಚಾರವೆಂದರೆ ಕೆಟ್ಟಕೆಲಸದಿಂದ ಒಳ್ಳೆಯ ಬುದ್ಧಿ ನಾಶವಾಗುತ್ತದೆ; ಒಳ್ಳೆಯ ಬುದ್ಧಿ ನಷ್ಟವಾಗಿ ಕೆಟ್ಟ ಕೆಲಸಗಳೇ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ.

ಪಾಪಂ ಪ್ರಜ್ಞಾಂ ನಾಶಯತಿ ಕ್ರಿಯಮಾಣಂ ಪುನಃ ಪುನಃ ।
ನಷ್ಟಪ್ರಜ್ಞಃ ಪಾಪಮೇವ ಪುನರಾರಭತೇ ನರಃ ॥

ಈ ಅನಿಷ್ಟಪರಂಪರೆಗೆ ನಮ್ಮನ್ನು ಸಿಲುಕಿಸುವುದೇ ಸಂಸಾರ.

ಈ ವಿರೋಧಿವರ್ಗಗಳಿಗೆ ವಿರುದ್ಧವಾಗಿಯೇ ಉಪಾಯಗಳು ನಿಲ್ಲಬೇಕು. ಕರ್ಮ, ಜ್ಞಾನ, ಭಕ್ತಿಗಳಲ್ಲದೆ ವೈರಾಗ್ಯ ಮತ್ತು ಆಚಾರ್ಯಾಭಿಮಾನಗಳನ್ನೂ ಉಪಾಯಸ್ವರೂಪದಲ್ಲಿ ಹೇಳುತ್ತಾರೆ. ಶ್ರೀವೈಷ್ಣವರಲ್ಲಿ ಆಚಾರ್ಯನಿಷ್ಠೆಗೆ ಹೆಚ್ಚಿನ ಮಹತ್ತ್ವವಿದೆ. ಆಚಾರ್ಯನು ಓಡಿಯಾಡುವ ಪರಬ್ರಹ್ಮನೇ (ಆಚಾರ್ಯಸ್ತು ಹರಿಃ ಸಾಕ್ಷಾತ್ ಚರರೂಪೀ ನ ಸಂಶಯಃ) ಎಂದು ಅವರ ಶ್ರದ್ಧೆ. ''ಜಂಗಮ ಶ್ರೀ ವಿಮಾನಾನಿ ಹೃದಯಾನಿ ಮನೀಷಿಣಃ'' ಎನ್ನುವ ಮಾತೂ ಗುರುವಿನ ಹಿರಿಮೆಯನ್ನು ತೋರಿಸುತ್ತದೆ.

ರಾಮಾನುಜಾಚಾರ್ಯರ ಶಿಷ್ಯನಾದ ಮುದಲಿಯಾಂಡನ್ ತನ್ನ ಪಾಶುರವೊಂದರಲ್ಲಿ ಆಚಾರ್ಯಾಭಿಮಾನದ ಗುಟ್ಟನ್ನು ಹೊರಗೆಡಹಿದ್ದಾನೆ. ''ಒಂದು ಬೆಟ್ಟದಮೇಲೆ ನಿಂತ ಸಿಂಹ ಮತ್ತೊಂದು ಬೆಟ್ಟಕ್ಕೆ ನೆಗೆಯುವಾಗ ಅದರ ಮೈಮೇಲೆ ಇರುವ ಜಂತುಗಳೂ ಅದರೊಂದಿಗೇ, ತಮ್ಮ ಅರಿವಿಲ್ಲದೆ ಪ್ರಯತ್ನವೂ ಇಲ್ಲದೆ, ಒಯ್ಯಲ್ಪಡುವಂತೆಯೇ ಭಾಷ್ಯಕಾರರಾದ ರಾಮಾನುಜರು ಸಂಸಾರ ಸಾಗರವನ್ನು ದಾಟುವಾಗ ಅವರನ್ನು ನಂಬಿಕೊಂಡಿರುವ ನಾವು ಕೂಡ ದಾಟಿ ಹೋಗುತ್ತೇವೆ!'' (ಒರುಮಲೈಯಿ ನಿನ್ರುಂ ಒರು ಮಲೈಯಿಲೇ ತಾವುಂ ಸಿಂಹಶರೀರತ್ತಿಲ್ ಜಂತುಕ್ಕಳೈಪೋಲೆ ಭಾಷ್ಯಕಾರರ್ ಸಂಸಾರಾತಿಲಂಘನಂ ಪಣ್ಣಾ ಅವರೋಡುಣ್ಡಾನ ಕುಡಲ್ ತುವಕ್ಕಾಲೇ ನಾಮ್ ಉತ್ತೀರ್ಣರಾವುದೋಂ).

ಪ್ರಪದನದಲ್ಲಿ ಒದಗುವ ಶ್ರೇಯಸ್ಸಿಗೆ, ಭಗವತ್ಕೈಂಕರ್ಯವೆಂಬ ಪುರುಷಾರ್ಥಸಿದ್ಧಿಗೆ, ಆಚಾರ್ಯರೇ ಪ್ರಧಾನಕಾರಣ; ಅದಕ್ಕಾಗಿಯೇ ''ಆಚಾರ್ಯವಾನ್ ಭವೇತ್'' ಎನ್ನುವ ಮಾತು ಉಂಟಾಗಿರುವುದು. ಜ್ಞಾನ ಪ್ರಾಪ್ತಿಗೂ ಉಪಾಯಾನುಷ್ಠಾನಕ್ಕೂ ದಾರಿ ತೋರಿಸುವವರು ಅವರು ಎನ್ನುವ ಕಾರಣದಿಂದಲೇ ಅವರು 'ದೇಶಿಕ'ರು. ಆಚಾರ್ಯ ಸಂಬಂಧ

ವಾದುದಕ್ಕೆ ಕೃತಜ್ಞತಾಭಾವವಿರಬೇಕಾದುದು ಮುಖ್ಯ. ಭಗವಂತನೇ ಶ್ರುತಿಯಲ್ಲಿ, ಗೀತೆಯಲ್ಲಿ, ಅರ್ಚಾವತಾರಗಳಲ್ಲಿ ಪ್ರಪತ್ತಿಯ ಮರ್ಮವನ್ನು ಹೇಳಿದ್ದಾನಾಗಿ ಅವನೇ ಆದಿಗುರು; ಹಾಗೆಂದೇ ಮುಮುಕ್ಷುವಾದ ಜೀವನನ್ನು ''ಪ್ರಥಮಗುರು ಕೃಪಾಗೃಹ್ಯಮಾಣ''ನೆಂದು ಹೇಳುವುದು. ಭಗವಂತನು ಗೀತಾಚಾರ್ಯನಾಗಿ ''ಸರ್ವಧರ್ಮಗಳನ್ನೂ ಪರಿತ್ಯಜಿಸಿ ನನ್ನನ್ನೇ ಆಶ್ರಯಿಸು'' ಎಂದು ಅರ್ಜುನನನ್ನು ನೆವಮಾಡಿಕೊಂಡು ಎಲ್ಲ ಜೀವರಿಗೂ ಹೇಳಿದ್ದಾನಷ್ಟೆ. ವೇಂಕಟೇಶ್ವರನ ಅರ್ಚಾಮೂರ್ತಿಯಲ್ಲಿ ಕಾಣುವ ವರದ (ವೈಕುಂಠ) ಹಸ್ತವು ನಿಜವಾಗಿ ತನ್ನ ಚರಣಗಳೇ ಮೋಕ್ಷಕ್ಕೆ ಉಪಾಯ ಎಂದು ನಿರ್ದೇಶನಮಾಡುವ ಮುದ್ರೆ. ಈ ಕಾರಣದಿಂದಲೇ ಅವನನ್ನು ''ದೇಶಿಕಂ ವೇಂಕಟೇಶ್ವರಂ'' ಎಂದು ಪ್ರಾರ್ಥನೆ ಮಾಡುತ್ತಾರೆ.

ಅಂತೂ ವಿಶಿಷ್ಟಾದ್ವೈತಮತದ ಪ್ರಕ್ರಿಯೆಯಲ್ಲಿ ಅರ್ಥ ಪಂಚಕಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ವೇದಾಂತ ದೇಶಿಕರು ಇದನ್ನು ''ಸಿದ್ಧಾಂತಕ್ಕು ತಳಮಾಕ್ಕಿ ಇತ್ತೈಯನು ಬಂಧಿತ್ತಿರುಕ್ಕುಂ'' (ಸಿದ್ಧಾಂತಕ್ಕೆ ತಳಪಾಯವಾಗಿ ನಿಂತಿದೆ) ಎಂದು ಮೊದಲಾಗಿ ವಿವರಿಸಿದ್ದಾರೆ. ಎಲ್ಲ ವೇದ, ಇತಿಹಾಸ, ಪುರಾಣಗಳೂ ಇದನ್ನೇ ಹೇಳುವುವೆಂದು ಅವರ ಶ್ರದ್ಧೆ. (''ಪ್ರಾಪ್ಯಸ್ಯ ಬ್ರಹ್ಮಣೋ ರೂಪಂ ಪ್ರಾಪ್ತುಶ್ಚ ಪ್ರತ್ಯಗಾತ್ಮನಃ । ಪ್ರಾಪ್ತ್ಯುಪಾಯಂ ಫಲಂ ಚೈವ ತಥಾ ಪ್ರಾಪ್ತಿವಿರೋಧಿ ಚ। ವದಂತಿ ಸಕಲಾ ವೇದಾಸ್ಸೇತಿಹಾಸಪುರಾಣಕಾಃ ॥'') ಅರ್ಥಪಂಚಕವನ್ನು ರಹಸ್ಯತ್ರಯವಾದ ಮೂಲಮಂತ್ರ, ದ್ವಯಮಂತ್ರ, ಚರಮಶ್ಲೋಕಗಳಲ್ಲಿಯೂ ಕಾಣಬಹುದು ಎಂದು ಅವರು ತೋರಿಸಿಕೊಟ್ಟಿದ್ದಾರೆ.

''ಓಂ ನಾರಾಯಣಾಯ ನಮಃ'' ಎನ್ನುವ ಮೂಲ ಮಂತ್ರದಲ್ಲಿ ಪ್ರಣವವು ಪ್ರಾಪ್ಯ, 'ನಾರ' (ಎಂದರೆ ಜೀವ) ವು ಪ್ರಾಪ್ತೃ, 'ಅಯನ' ಮತ್ತು ನಮಸ್ಕಾರಗಳಲ್ಲಿ ಇಷ್ಟೋಪಾಯ (ಸಿದ್ಧ-ಸಾಧ್ಯೋಪಾಯಗಳು) ಸೂಚಿತವಾಗಿದೆ. ''ಶ್ರೀಮನ್ನಾರಾಯಣಚರಣೌ ಶರಣಂ ಪ್ರಪದ್ಯೇ'' ಎನ್ನುವ

ದ್ವಯಾನುಸಂಧಾನ-ಮಂತ್ರದಲ್ಲಿ ಶ್ರೀಮನ್ನಾರಾಯಣ ಎನ್ನುವುದು ಪ್ರಾಪ್ಯ; 'ಪ್ರಪದ್ಯೆ' (ಆಶ್ರಯಿಸುತ್ತೇನೆ) ಎನ್ನುವ ಮಾತಿನಲ್ಲಿ ಅಡಗಿರುವ ಉತ್ತಮ ಪುರುಷ ('ನಾನು' ಎಂಬುದು) ಪ್ರಾಪ್ತ; 'ಚರಣಗಳನ್ನು ಆಶ್ರಯಿಸುತ್ತೇನೆ' ಎಂಬಲ್ಲಿ ಪ್ರಾಪ್ತಿಯ ಉಪಾಯ ಕಾಣಿಸುತ್ತದೆ; ಇಲ್ಲಿ ಧ್ವನಿತವಾಗುವ ಕೈಂಕರ್ಯವೇ ಫಲ; ಅನುಸಂಧಾನದಲ್ಲಿ ಅಡಗಿರುವ 'ನಾನು' ಎನ್ನುವ ಅಭಿಮಾನವು ಪ್ರಾಪ್ತಿವಿರೋಧಿ.

ಹೀಗೆಯೇ ಚರಮಶ್ಲೋಕ (''ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ ॥'') ದಲ್ಲಿ ಕೂಡ ಇದೇ ತಾತ್ಪರ್ಯ. ಭಗವಂತನನ್ನು ಹೇಳುವ ''ಮಾಮೇಕಂ'', ''ಅಹಂ'' ಎಂಬ ಮಾತುಗಳು ಪ್ರಾಪ್ಯವನ್ನು ಸೂಚಿಸುತ್ತವೆ; ''ವ್ರಜ'', ''ತ್ವಾ'', ''ಮಾ ಶುಚಃ'' ಎಂಬ ಮಾತುಗಳಲ್ಲಿ ಬರುವ ಮಧ್ಯಮ ಪುರುಷ ನಿರ್ವಚನವು ಪ್ರಾಪ್ತೃವನ್ನು ಹೇಳುತ್ತದೆ. ''ನನ್ನನ್ನೇ ಶರಣು ಹೋಗು'' ಎನ್ನುವಲ್ಲಿ ಪ್ರಾಪ್ತಿಯ ಉಪಾಯವು ವ್ಯಕ್ತವಾಗಿದೆ; ''ನನ್ನನ್ನೇ'' ಎಂದರೆ ಸಿದ್ಧೋಪಾಯ, ''ಶರಣುಹೋಗು'' ಎನ್ನುವುದು ಸಾಧ್ಯೋಪಾಯ. ''ಎಲ್ಲ ಪಾಪಗಳಿಂದಲೂ ಬಿಡಿಸುತ್ತೇನೆ'' (ಮೋಕ್ಷಯಿಷ್ಯಾಮಿ) ಎನ್ನುವಲ್ಲಿ ಫಲಪ್ರಾಪ್ತಿ ಕಾಣುತ್ತದೆ. ಪಾಪಗಳು ಇದನ್ನು ಅಡ್ಡಗಿಸುತ್ತವೆಯೆನ್ನುವ ಸೂಚನೆ ''ಸರ್ವ ಪಾಪೇಭ್ಯಃ'' ಎನ್ನುವ ಮಾತಿನಲ್ಲಿ ಅಡಗಿದೆ; ಇದು ಪ್ರಾಪ್ತಿವಿರೋಧಿ.

ಹೀಗೆ ರಹಸ್ಯತ್ರಯದಲ್ಲಿ ಅರ್ಥಪಂಚಕವು ಧ್ವನಿರೂಪವಾಗಿ ಸೇರಿದೆಯೆಂದು ತಿಳಿಯುವವನನ್ನು ದೇಶಿಕರು ''ಸಮ್ಮತಸ್ಸರ್ವವೇದಿ'' ಯೆಂದು ಕರೆದಿದ್ದಾರೆ. ಈ ಐದಕ್ಕೆ ಶರೀರಾತ್ಮಭ್ರಾಂತಿ (ಶರೀರಶರೀರಿ ಸಂಬಂಧ) ಯನ್ನೂ ಸೇರಿಸಿ ಷಡರ್ಥಗಳೆಂದು ವ್ಯವಹರಿಸುವ ವಾಡಿಕೆ ಯುಂಟು. ಮುಮುಕ್ಷುವಿಗೆ ಶರೀರ-ಶರೀರಿ ಭಾವ ಅಥವಾ ಶೇಷ-ಶೇಷಿ ಭಾವ ಇದು ಪ್ರಧಾನ ಪ್ರತಿತಂತ್ರವೆಂದು ಸೋಮೇಶಿಯಾಂಡಾನ್

ಮೊದಲಾದವರು ಪರಿಗ್ರಹಿಸಿದ್ದಾರೆ. ಪ್ರತಿತಂತ್ರವೆಂದರೆ ಉಳಿದ ಯಾವ ಸಿದ್ಧಾಂತದ ಪ್ರಕ್ರಿಯೆಗಳಲ್ಲಿಯೂ ಕಾಣಿಸಿಕೊಳ್ಳದೆ ಈ ಸಿದ್ಧಾಂತಕ್ಕೆ ಮಾತ್ರ ವಿಶಿಷ್ಟವಾಗಿರುವ, ಅಸಾಧಾರಣವಾದ, ವಿವರ. ಅರ್ಥಪಂಚಕ (ಅಥವಾ ಷಡರ್ಥ)ದ ಕಲ್ಪನೆಯು ವಿಶಿಷ್ಟಾದ್ವೈತಸಿದ್ಧಾಂತಕ್ಕೆ ವಿಶಿಷ್ಟವಾದ ವಿವರ ವೆನ್ನುವುದೇನೋ ನಿರ್ವಿವಾದ.

★★★

ಪರಿಶಿಷ್ಟ

ರಾಮಾನುಜಾಚಾರ್ಯರ ದರ್ಶನದ ಪರಿಚಯವನ್ನು ಸಮಗ್ರವಾಗಿ ಪಡೆಯಬೇಕೆಂದರೆ ಅವರ ಬ್ರಹ್ಮಸೂತ್ರಭಾಷ್ಯ (ಶ್ರೀಭಾಷ್ಯ), ವೇದಾಂತಸಾರ, ವೇದಾಂತ ದೀಪಗಳನ್ನು ನೋಡಬೇಕು. ಇವರ ಬ್ರಹ್ಮಸೂತ್ರಭಾಷ್ಯಕ್ಕೆ ಹದಿಮೂರನೆಯ ಶತಮಾನದಲ್ಲಿದ್ದ ಸುದರ್ಶನಸೂರಿ ಎನ್ನುವವರು ಶ್ರುತ ಪ್ರಕಾಶಿಕೆಯೆಂಬ ವ್ಯಾಖ್ಯಾನವನ್ನು ಬರೆದಿದ್ದಾರೆ.

ಶ್ರೀಭಾಷ್ಯಕ್ಕೆ ತತ್ತ್ವಟೀಕೆಯೆನ್ನುವ ವ್ಯಾಖ್ಯಾನ ಪ್ರಸಿದ್ಧವಾದುದು. ಇದನ್ನು ಬರೆದ ವೇಂಕಟನಾಥರು (ಜನನ ೧೨೬೧) ಅಥವಾ ವೇದಾಂತದೇಶಿಕರು ಶ್ರೀ ವೈಷ್ಣವಸಿದ್ಧಾಂತದಲ್ಲಿ ಎತ್ತಿದ ಹೆಸರು; ಆ ಸಂಪ್ರದಾಯದವರು ಇವರನ್ನು ನಿಗಮಾಂತ ಮಹಾದೇಶಿಕರೆಂದು ಗೌರವದಿಂದ ವ್ಯವಹರಿಸುತ್ತಾರೆ. ಇವರ ತತ್ತ್ವಮುಕ್ತಾಕಲಾಪ, ನ್ಯಾಯಸಿದ್ಧಾಂಜನ ಮತ್ತು ಸೇಶ್ವರ ಮೀಮಾಂಸೆ ಈ ಸಂಸ್ಕೃತ ಗ್ರಂಥಗಳೂ ರಹಸ್ಯತ್ರಯಸಾರವೆಂಬ ತಮಿಳುಗ್ರಂಥವೂ ರಾಮಾನುಜದರ್ಶನದ ಪ್ರಮೇಯಗಳನ್ನು ಸ್ಪಷ್ಟಪಡಿಸುತ್ತವೆ. ರಾಮಾನುಜಾ ಚಾರ್ಯರ ಭಗವದ್ಗೀತಾ-ಭಾಷ್ಯಕ್ಕೆ ಇವರು ತಾತ್ಪರ್ಯ ಚಂದ್ರಿಕೆಯೆಂಬ ವ್ಯಾಖ್ಯಾನವನ್ನು ಸಿದ್ಧಪಡಿಸಿದ್ದಾರೆ.

ದೇಶಿಕರು ವಡಗಲೆ (ಉತ್ತರಾದಿ) ಸಂಪ್ರದಾಯದವರಿಗೆ ಮಾರ್ಗದರ್ಶಿಗಳಾದರೆ ಲೋಕಾಚಾರ್ಯರು (೧೩೦೦ರ ಸುಮಾರು) ತೆಂಗಲೆ ಅಥವಾ ದಕ್ಷಿಣಾದಿ ಸಂಪ್ರದಾಯದಲ್ಲಿ ಮಾನ್ಯರು. ಇವರು ಬರೆದಿರುವ ತತ್ತ್ವತ್ರಯ ಪ್ರಸಿದ್ಧವಾದ ಗ್ರಂಥ

ರಾಮಾನುಜಾಚಾರ್ಯರು ಪ್ರಸ್ಥಾನತ್ರಯದಲ್ಲಿ ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳಿಗೆ ಭಾಷ್ಯಗಳನ್ನು ಬರೆದರು; ಉಪನಿಷತ್ತುಗಳಿಗೆ ಏನು ಕಾರಣದಿಂದಲೋ ಬರೆಯಲಿಲ್ಲ. ಹದಿನಾರನೆಯ ಶತಮಾನದಲ್ಲಿ ಜೀವಿಸಿದ್ದ

ರಂಗರಾಮಾನುಜ ಮುನಿಗಳು ದಶೋಪನಿಷತ್ತುಗಳ ಮೇಲೆ ವಿಶಿಷ್ಟಾದ್ವೈತ ಪರವಾದ ಭಾಷ್ಯವನ್ನು ಸಿದ್ಧಪಡಿಸಿದ್ದಾರೆ. ಶ್ರೀಭಾಷ್ಯಕ್ಕೆ ವೇದಾಂತ ದೇಶಿಕರ ವ್ಯಾಖ್ಯೆಯಾದ ಶ್ರುತಪ್ರಕಾಶಿಕೆಗೆ ಇವರು ಭಾವಪ್ರಕಾಶಿಕೆಯೆನ್ನುವ ಹೆಸರಿನಿಂದ ವಿಸ್ತಾರವಾದ ವ್ಯಾಖ್ಯಾನವೊಂದನ್ನು ಬರೆದಿದ್ದಾರೆ.

ಶ್ರೀನಿವಾಸಸೂರಿಗಳ ಯತೀಂದ್ರಮತದೀಪಿಕೆಯೆನ್ನುವ ಗ್ರಂಥವು ಈ ದರ್ಶನದ ಸಿಂಹಾವಲೋಕನವನ್ನು ಸರಳವಾದ ಶೈಲಿಯಲ್ಲಿ ಒದಗಿಸುತ್ತದೆ. ಇದು ಹದಿನಾರನೆಯ ಶತಮಾನಕ್ಕೆ ಮೊದಲೇ ಸಿದ್ಧವಾದ ಗ್ರಂಥವೆಂದು ಹೇಳುತ್ತಾರೆ.

★★★

ಪ್ರೊ. ಸಾ. ಕೃ. ರಾಮಚಂದ್ರ ರಾವ್ ಸ್ಮಾರಕ ನಿಧಿ (ರಿ.)

ಸದಸ್ಯರು :

ಶ್ರೀಮತೀ ರಮಾ ರಾಮಚಂದ್ರರಾವ್

ಶ್ರೀಮತೀ ಡಾ. ಉಮಾ ಅನಿಲ್ ಕುಮಾರ್

ಶ್ರೀ ಡಾ॥ ಸಾ. ರಾ. ಸುದರ್ಶನ್

ನಮ್ಮ ಸ್ಮಾರಕ ನಿಧಿಯು ಪ್ರೊ. ಸಾ. ಕೃ. ರಾಮಚಂದ್ರ ರಾವ್ ಅವರ ಉಪನ್ಯಾಸಗಳನ್ನು ಧ್ವನಿಸುರುಳಿ ರೂಪದಲ್ಲಿ ಹೊರತಂದಿವೆ. ಅದರ ವಿವರಗಳು ಹೀಗಿವೆ.

೧. ವೇದದಿಂದ ವೇದಾಂತಕ್ಕೆ (ಎಂಪಿ ೩) (೩ ೧/೨ ಘಂಟೆ)
೨. ಅಭಿನವ ಗುಪ್ತ (೩ ೧/೨ ಘಂಟೆ)
೩. ರಾಮಾಯಣ (೩ ಘಂಟೆ)
೪. ಮಾಧ್ವ ಸಿದ್ಧಾಂತ (೩ ಘಂಟೆ)
೫. ಪತಂಜಲಿಯ ಯೋಗಸೂತ್ರಗಳು (೧೨ ಘಂಟೆ)
೬. ರಾಘವೇಂದ್ರ ಸ್ವಾಮಿಗಳ ಗೀತಾ ವಿವೃತ್ತಿ (೧೨ ಘಂಟೆ)
೭. ಸಾಂಖ್ಯ ಸೂತ್ರಗಳು (೧೫ ಘಂಟೆ)
೮. ಉಪನಿಷತ್ತಿನಲ್ಲಿ ವಿದ್ಯೆಗಳು (೬ ಘಂಟೆ)
೯. ತ್ರಿಪುರಾ ರಹಸ್ಯ (೧೨ ಘಂಟೆ)
೧೦. ವೇದ ಮತ್ತು ಅದರ ವಿಶ್ಲೇಷಣೆ (೨ ಘಂಟೆ)
೧೧. ಹಠಯೋಗ ಪ್ರದೀಪಿಕೆ (೮ ೧/೨ ಘಂಟೆ)
೧೨. ಶಂಕರಾಚಾರ್ಯ ಮತ್ತು ಅಧ್ಯಾಸ ಭಾಷ್ಯ (೧ ೧/೨ ಘಂಟೆ)
೧೩. ಮಾಂಡೂಕ್ಯ ಉಪನಿಷತ್ತು (ಡಿವಿಡಿ)

೧೪. ಉಪನಿಷತ್ತುಗಳು ಮತ್ತು ಶಂಕರ, ಬುದ್ಧ, ಬೃಹದಾರಣ್ಯಕ ಉಪನಿಷತ್ತು

೧೫. ರಾಯರ ೧೩ ಉಪನ್ಯಾಸಗಳ ಸಂಗ್ರಹ

೧೬. Siva Sutras (mp3) (20 hours)

೧೭. Darsanas(Systems of Indian Philosophy)(mp3) (12 hours)

★★★

ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ (ರಿ.)

ನಮ್ಮ ಪ್ರಕಟಣೆಗಳು ಹೀಗಿವೆ.

ಕನ್ನಡ		ರೂ. ಪೈ.
1.	ಶ್ರೀ ರಾಘವೇಂದ್ರ ಸ್ವಾಮಿಗಳು	40.00
2.	ದಂಡಿಯ ಅವಂತಿಸುಂದರೀ – ಒಂದು ಸಂಕ್ಷಿಪ್ತ ಕಥನ	70.00
3.	ಶ್ರೀ ಪುರಂದರ ದಾಸರು	70.00
4.	ಬೋಧಿಯ ಬೆಳಕಿನಲ್ಲಿ – ಬುದ್ಧನ ಬಾಳು–ಬೆಳಕು	100.00
5.	ವೇದದಲ್ಲಿನ ಕಥೆಗಳು	60.00
6.	ಭಾರತದ ದೇವಾಲಯಗಳು ನೆಲೆ–ಹಿನ್ನೆಲೆ	75.00
7.	ಶ್ರೀ ಶಾರದಾಪೀಠದ ಮಾಣಿಕ್ಯ	120.00
8.	ಪೂರ್ಣಪ್ರಜ್ಞ ಪ್ರಶಸ್ತಿ – ಶ್ರೀ ಮಧ್ವಾಚಾರ್ಯರ ಬಾಳು–ಬೆಳಕು	80.00

English.

1.	The Three Ācharyas: Śankara, Rāmānuja, Madhva	40.00
2.	The Teachings of the Buddha	85.00
3.	Temples: Icons and Rituals	100.00
4.	Jainism in South India	85.00
5.	Ādhyātma Rasa Ranjani of Viṣṇutīrtha	20.00
6.	The Hill Shrine of Tirupati	200.00
7.	The Saint of Śringeri	200.00

₹ 40/-